HRUDHAYA VAHINI *Kannada Monthly*

# ಹೃದಯ ವಾಹಿನಿ

ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪತ್ರಿಕೆ

RNI NO. KARKAN / 2010 / 34505 ಜನಮನ ಸ್ಪಂದನ ಕನ್ನಡ ಮಾಸ ಪತ್ರಿಕೆ

TO BE POSTED ON 14TH OF EVERY MONTH AT ASHOKNAGAR POST OFFICE

Volume - 6 Issue - 7 14 March 2016 ☎ 0824-4281531, 9886510087 Mangalore

E-mail : hrudayavahini@rediffmail.com www.hrudayavahini.com Price : **Rs. 12-00**



ಮನಾಮ : ಇತ್ತೀಚೆಗೆ ಜರುಗಿದ ಬಂಟ್ಸ್ ಬಹರಿನ್‌ನ ವಾರ್ಷಿಕ ಮಹಾಸಭೆಯಲ್ಲಿ 2016ನೇ ಸಾಲಿನ ನೂತನ ಕಾರ್ಯಕಾರಿ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಕುಳಿತವರು ಎಡದಿಂದ ಬಲಕ್ಕೆ : ಉಮೇಶ್ಚಂದ್ರ ರೈ – ಕೋಶಾಧಿಕಾರಿ, ರೋಶನ್ ಶೆಟ್ಟಿ – ಪ್ರಧಾನ ಕಾರ್ಯದರ್ಶಿ, ರಾಜೇಶ್ ಬಿ.ಶೆಟ್ಟಿ – ಅಧ್ಯಕ್ಷ, ಮಿಥುನ್ ಭಂಡಾರಿ ಉಪಾಧ್ಯಕ್ಷ ಮತ್ತು ಸುಜ್ಯೋತಿ ಶೆಟ್ಟಿ – ಉಪಪ್ರಧಾನ ಕಾರ್ಯದರ್ಶಿ.

ನಿಂತವರು ಎಡದಿಂದ ಬಲಕ್ಕೆ : ಶರತ್ ಶೆಟ್ಟಿ – ಕ್ರೀಡಾ ಕಾರ್ಯದರ್ಶಿ, ತೇಜಸ್ ಶೆಟ್ಟಿ – ಸಾರ್ವಜನಿಕ ಸಂಪರ್ಕ ಅಧಿಕಾರಿ, ನಿತಿನ್ ಶೆಟ್ಟಿ – ಸಹ ಕ್ರೀಡಾ ಕಾರ್ಯದರ್ಶಿ, ಯಕ್ಷಿತ್ ಶೆಟ್ಟಿ – ಸಹ ಮನರಂಜನಾ ಕಾರ್ಯದರ್ಶಿ ಮತ್ತು ಸಂಜೀವ ಶೆಟ್ಟಿ – ಮನರಂಜನಾ ಕಾರ್ಯದರ್ಶಿ.

## ಹಾಂಗ್‌ಕಾಂಗ್ : ದಾಸಕೀರ್ತನೆ ಕಾರ್ಯಕ್ರಮ

2016ನೇ ಸಾಲಿನ ಮೊದಲ ಕಾರ್ಯಕ್ರಮವಾದ ದಾಸ ಕೀರ್ತನೆ ಕಾರ್ಯಕ್ರಮವು ದಿನಾಂಕ 27–2–2006ರ ಶನಿವಾರ ಸಂಜೆ ಲೈಚಿಕೊಕ್‌ನ ಕ್ಲಬ್ ಹೌಸ್‌ನಲ್ಲಿ ಯಶಸ್ವಿಯಾಗಿ ನೆರವೇರಿತು. ಶ್ರೀಮತಿ ಕಲ್ಯಾಣಿಯವರು ಹಾಗೂ ಅತಿಥಿಗಳಾಗಿ ಶ್ರೀ ಹರ್ಷ ನರಸಿಂಹ ಮತ್ತು ಅರುಣ್‌ರವರು ವೇದಿಕೆಯನ್ನು ಅಲಂಕರಿಸಿದ್ದರು. ಎಲ್ಲರೂ ಸಭೆಯನ್ನುದ್ದೇಶಿಸಿ ಕೆಲವು ಕಲ್ಯಾಣಿಯವರ ವೀಣಾವಾದನ, ಅರುಣ್‌ರವರ ಮೃದಂಗ ವಾದನ, ಹರ್ಷರವರ ಕಂಜೀರ ವಾದನ, ರವಿಶ್ರಾಫ್‌ರವರ ತಾಳ ವಾದ್ಯ, ಸೇರಿದವರೆಲ್ಲರ ಮನಸೂರೆಗೊಂಡಿತು.




ಶ್ರೀ ಸದಾಶಿವ ಹೆಗಡೆಯವರು ದಾಸ ಪರಂಪರೆಯ ಮಹಾನುಭವರಿಗೆ ಪೂಜೆಯನ್ನು ಸಲ್ಲಿಸುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಡಾ॥ ವಿಶ್ವೇಶ್ವರಯ್ಯರವರು ಮುಖ್ಯ ಅತಿಥಿಗಳಾಗಿ ಮಾತುಗಳನ್ನಾಡಿದರು.

ಸಂಘದ ಪ್ರಾಸ್ತಾವಿಕ ಭಾಷಣವನ್ನು ಶ್ರೀ ಸದಾಶಿವ ಹೆಗಡೆಯವರು ನಡೆಸಿಕೊಟ್ಟರು. ಶ್ರೀಮತಿ ವಾಣಿ ರಮೇಶ್‌ರವರು ದಾಸರ ಕಿರು ಪರಿಚಯವನ್ನು ಮಾಡಿಕೊಟ್ಟರು.

ಸಂಘದ ಹಲವು ಸದಸ್ಯರಾದ ರಶ್ಮಿ ಶ್ರಾಫ್, ಸದಾಶಿವ ಹೆಗಡೆ, ಕೃಷ್ಣಸ್ವಾಮಿ, ಸಮೀರ್, ರವಿಶ್ರಾಫ್, ಗೀತಾ ನಾಗೇಂದ್ರ, ವಾಣಿ ರಮೇಶ್, ಶೋಭಾ ಶ್ರಾಫ್, ಶಿವ

3ನೇ ಪುಟಕ್ಕೆ

ಹೃದಯವಾಹಿನಿಯ ಓದುಗರಿಗೆ, ಜಾಹೀರಾತುದಾರರಿಗೆ ಮತ್ತು ಹಿತೈಷಿಗಳಿಗೆ ಯುಗಾದಿ ಹಬ್ಬದ ಶುಭಾಶಯಗಳು



Do You Want Buy Or Sale

**Property**

at **Mangalore.**

Houses, Sites, Flats & Plots

ನೀವು ಮಂಗಳೂರಿನಲ್ಲಿ

ಮನೆ, ನಿವೇಶನ, ಫ್ಲಾಟ್ಸ್ ಮತ್ತು ವಾಣಿಜ್ಯ ನಿವೇಶನ

ಖರೀದಿಸುವ ಅಥವಾ ಮಾರುವ ಉದ್ದೇಶವಿದೆಯೇ?

Contact : MAASS Realators

6

## ಔಷಧೀಯ ಸಸ್ಯ ಲೋಳೆಸರ

– ಅನಿತಾ ಬನಾರಿ




ಔಷಧೀಯ ಸಸ್ಯ ಎಂದು ಗುರುತಿಸಿಕೊಂಡ ಲೋಳೆಸರ ಚರ್ಮದ ಆರೈಕೆಯಲ್ಲೂ ಪ್ರಮುಖ ಪಾತ್ರವಹಿಸುತ್ತದೆ. ಎಲೆಗಳು ಲೋಳೆಯನ್ನು ಹೊಂದಿರುವುದರಿಂದ ಲೋಳೆಸರ ಎಂದು ಕರೆಯಲ್ಪಡುವ ಈ ಸಸ್ಯ ಲಿಲಿಯೋಸಿ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಅಲೋವೆರಾ.

ಲೋಳೆಸರ ಸಸ್ಯವು ದಪ್ಪವಾಗಿದ್ದು ಇದು ಹೆಚ್ಚಿನ ನೀರಿನ ಅಂಶ ಹೊಂದಿರುತ್ತದೆ. ಆದುದರಿಂದ ಇವಕ್ಕೆ ಬೆಳೆಯಲು ಹೆಚ್ಚಿನ ನೀರು ಬೇಕಾಗುವುದಿಲ್ಲ. ಇನ್ನು ಸಾಮಾನ್ಯವಾಗಿ ಇದನ್ನು ಎಲ್ಲಾ ಕಡೆ ಬೆಳೆಸಬಹುದು. ಕವಲುಗಳಾಗಿ ಬೆಳೆಯುವ ಈ ಸಸ್ಯದ ಬೇರುಗಳು ತುಂಬಾ ಆಳ ಹೋಗುವುದಿಲ್ಲ. ಸೌಂದರ್ಯ ವಿಷಯದಲ್ಲಿ ಪ್ರಮುಖ ಪಾತ್ರವಹಿಸುವ ಲೋಳೆಸರದಲ್ಲಿ ಚರ್ಮದ ಆರೈಕೆಗೆ ಬೇಕಾದ ಪೋಷಕಾಂಶಗಳನ್ನು ಒಳಗೊಂಡಿದೆ. ಚರ್ಮದಲ್ಲಿ ಇರುವ

2ನೇ ಪುಟಕ್ಕೆ

## ವಿಶ್ವನುಡಿ



ಕೆರೆ ಹಳ್ಳ ಬಾವಿಗಳು ಮೂದರೆದರೆ
ಗುಳ್ಳೆ, ಗೊರಚೆ, ಚಿಪ್ಪು ಕಾಣಬಹುದು
ವಾರಿಧಿ ಮೈದೆರದರೆ ರತ್ನಂಗಳ ಕಾಣಬಹುದು
ಕೂಡಲ ಸಂಘನ ಶರಣರು
ಮನದೆರೆದು ಮಾತನಾಡಿದರೆ
ಲಿಂಗವ ಕಾಣಬಹುದು

– ಬಸವಣ್ಣ

## ಸಂಪಾದಕೀಯ

ಸೂರ್ಯ ಕಿರಣ

# ಜಗತ್ತೇ ಮುಷ್ಟಿಯೊಳಗೆ...

ಮೊಬೈಲ್ ಫೋನ್ ಬಳಕೆಗೆ ಬಂದ ಮೇಲೆ ಜಗತ್ತು ಮುಷ್ಟಿಯೊಳಗೆ ಸೆರೆಯಾಗಿದೆ ಎಂದರೆ ತಪ್ಪಾಗಲಾರದು. ಅದಕ್ಕೆ ತಕ್ಕಂತೆ ಆವಿಷ್ಕಾರಗೊಂಡಿದೆ ವಾಟ್ಸ್‌ಆ್ಯಪ್. ಈ ತಾಂತ್ರಿಕತೆ ಸರಳವಾಗಿರುವುದರಿಂದ ಜನಸಾಮಾನ್ಯರು ಕೂಡ ಇದರ ಬಳಕೆಯಲ್ಲಿ ತೊಡಗಿದ್ದಾರೆ. ಅದರಲ್ಲೂ ಕೈಗೆಟಕುವ ಬೆಲೆಯಲ್ಲಿ ಸಿಗುವ ಅಂತರ್ಜಾಲ. ನಗರಗಳ ಹೋಟೆಲ್, ಮಾಲ್‌ಗಳಲ್ಲಿ ದೊರೆಯುವ ಉಚಿತ ವೈ ಫೈ ಸೌಲಭ್ಯ, ಬಳಕೆದಾರರಿಗೆ ಮತ್ತಷ್ಟು ಉತ್ತೇಜನ ನೀಡುತ್ತಿದೆ. ಮೊಬೈಲ್ ಸಂಖ್ಯೆಯೊಂದಿಗೆ ಸಂಪರ್ಕ ಸಾಧಿಸುವ ಈ ವ್ಯವಸ್ಥೆಗೆ ಅಂತರ್ಜಾಲದ ಜೋಡಣೆಯಾದರೆ ಜಗತ್ತಿನ ಯಾವ ಮೂಲೆಯಲ್ಲಿದ್ದರೂ ತನ್ನ ಒಡನಾಟದ ಯಾವುದೇ ಮೊಬೈನಲ್ಲಿ ವ್ಯವಹರಿಸಬಹುದು. ಚಾಟ್ ಮಾಡಬಹುದು. ಧ್ವನಿ ಮುದ್ರಿಸಿ ರವಾನಿಸಬಹುದು. ಇತ್ತೀಚೆಗೆ ದೂರವಾಣಿಯಲ್ಲಿ ಮಾತನಾಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದು ಸಧ್ಯಕ್ಕೇ ಅಂತರ್ಜಾಲ ಬಳಕೆಯ ವೆಚ್ಚದ ಮಿತಿಯೊಳಗೆ ಬರುತ್ತದೆ. ಅಂದರೆ ಜಗತ್ತಿನ ಯಾವುದೇ ಮೂಲೆಯ ಮೊಬೈಲ್‌ಗೆ ಮಾತನಾಡಿದರೂ ಸ್ಥಳೀಯ ಕರೆಯ ದರಕ್ಕಿಂತಲೂ ಕಡಿಮೆ. ಆದರೆ ಕೆಲವು ದೇಶಗಳು ಈ ರೀತಿಯ ಸಂಹವನ ವ್ಯವಸ್ಥೆಗೆ ನಿರ್ಭಂದ ಹೇರಿವೆ. ಧ್ವನಿ ಸಂದೇಶಗಳು ಮಾತ್ರ ಅಬಾಧಿತ.

ಸೈಬರ್ ಕ್ರೈಮ್ ಪೊಲೀಸ್ ಇಲಾಖೆಯ ಶಿಸ್ತು ಕ್ರಮದಿಂದಾಗಿ, ನಿರಾಂತಕವಾಗಿ ಹರಿದಾಡುತ್ತಿದ್ದ ಅಶ್ಲೀಲ ದೃಶ್ಯಗಳು ಮತ್ತು ಧಾರ್ಮಿಕ ಭಾವನೆಗಳನ್ನು ಕೆರಳಿಸುತ್ತಿದ್ದ ಬರಹಗಳು ಮತ್ತು ಚಿತ್ರಗಳ ಹರಿದಾಟ ಈಗ ನಿಯಂತ್ರಣದಲ್ಲಿವೆ. ಅದರೆ ಅತ್ಯಂತ ಬೇಸರದ ಸಂಗತಿಗಳೆಂದರೆ ಅಪಘಾತಗಳ ವೀಡಿಯೋಗಳು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತವೆ. ಅದರಲ್ಲೂ ದುಃಖದ ಸಂಗತಿಯೆಂದರೆ, ಜೀವನ್ಮರಣದ ಸ್ಥಿತಿಯಲ್ಲಿ ಒದ್ದಾಡುವ ಗಾಯಾಳುಗಳನ್ನು ರಕ್ಷಿಸುವ ಪ್ರಯತ್ನ ಮಾಡದೆ, ಬರೀ ವೀಡಿಯೋ ಚಿತ್ರೀಕರಿಸಿ ವಾಟ್ಸ್‌ಆ್ಯಪ್‌ಗೆ ಅಪ್‌ಲೋಡ್ ಮಾಡುವುದರಲ್ಲಿ ಮಗ್ನರಾಗುತ್ತಿರುವ ಜನಸಾಮಾನ್ಯರ ಬಗ್ಗೆ ಮಾನವೀಯ ಅಂತಃಕರಣ ಉಳ್ಳವರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಇವು ಮಾನವರು ಮನುಷ್ಯತ್ವವನ್ನು ಕಳೆದುಕೊಳ್ಳುತ್ತಿರುವುದರ ಸ್ಪಷ್ಟ ಉದಾಹರಣೆಗಳು. ಅಂಥ ಘಟನೆಗಳಲ್ಲಿ ಸಹಾಯಕ್ಕೆ ಹೋದವರಿಗೆ ಪೊಲೀಸರಿಂದ ಆದ ತೊಂದರೆಗಳ ಪ್ರಸಂಗಗಳು ಸಾಕಷ್ಟಿವೆ. ಅಪಘಾತಗಳಲ್ಲಿ ಗಾಯಾಳುಗಳ ರಕ್ಷಣೆಗೆ ಧಾವಿಸಿದವರಿಗೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ನೋಡಿಕೊಳ್ಳಲು ಪೊಲೀಸ್ ಇಲಾಖೆಗೆ ಸುಪ್ರೀಂಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದೆ. ಆದರೂ ಜನರು ಹಿಂದಿನ ಆತಂಕದಿಂದ ಹೊರಬಂದಿಲ್ಲ. ಜನಸಾಮಾನ್ಯರಿಗೆ ಇದರ ಅರಿವು ಮೂಡಿಸುವ ಕೆಲಸ ಪೊಲೀಸ್ ಇಲಾಖೆಯದು.

ವಾಟ್ಸಪ್ ಬಳಕೆದಾರರು ಗಮನಿಸಬೇಕಾದ ಮುಖ್ಯ ವಿಷಯಗಳೆಂದರೆ ಗುಂಪನ್ನು ರಚಿಸುವಾಗ ಎಚ್ಚರಿಕೆ ವಹಿಸುವುದು ತುಂಬಾ ಒಳ್ಳೆಯದು. ಸಮಾಜ ಬಾಹಿರ ಸಂದೇಶಗಳನ್ನು ರವಾನಿಸುವ ಬಳಕೆದಾರರನ್ನು ಗ್ರೂಪ್‌ಗೆ ಸೇರಿಸಿಕೊಳ್ಳದೆ ಇರುವುದು ಒಳ್ಳೆಯದು. ಗ್ರೂಪ್‌ನ ಅಡ್ಮಿನ್ ಆದವರು ಸದಸ್ಯರಿಗೆ ಕಾನೂನು ಬಾಹಿರ ಸಂದೇಶಗಳನ್ನು ರವಾನಿಸದಂತೆ ಆಗಾಗ ಎಚ್ಚರಿಸುತ್ತಿರಬೇಕು. ಸೈಬರ್ ಕ್ರೈಮ್ ಅಧಿಕಾರಿಗಳ ತನಿಖೆಯಲ್ಲಿ ಆರೋಪ ಸಾಬೀತು ಆದಲ್ಲಿ ಜೈಲು ಶಿಕ್ಷೆಯಾಗುವ ಸಾಧ್ಯತೆ ಇಲ್ಲದಿಲ್ಲ. ತಮಾಷೆಯ ಸಂದೇಶಗಳಿಗೂ ಒಂದು ಮಿತಿ ಇರುವುದು ಒಳ್ಳೆಯದು. ಅದು ಯಾರನ್ನೂ ನೋಯಿಸುವಂತಿರಬಾರದು.

ವಾಟ್ಸಪ್‌ನಂತಹ ವೈಜ್ಞಾನಿಕ ಮತ್ತು ಆಧುನಿಕ ವ್ಯವಸ್ಥೆಯಲ್ಲಿಯೂ ಕೆಲವು ಮೂಢರು ಮೂಗು ತೂರಿಸುತ್ತಾರೆ ಯಾವುದೊ ದೇವರ ಹೆಸರಿನಲ್ಲಿ ಸಂದೇಶ ಕಳುಹಿಸಿ, ಈ ಸಂದೇಶವನ್ನು ಕನಿಷ್ಟ 20 ಜನರಿಗೆ ಕಳುಹಿಸಿದರೆ ಎರಡು ದಿನಗಳ ಒಳಗೆ ನೀವು ಶುಭ ಸುದ್ದಿಯನ್ನು ಕೇಳುತ್ತೀರಿ, ಇಲ್ಲದಿದ್ದಲ್ಲಿ ನಿಮಗೆ ಕೆಟ್ಟದ್ದಾಗುತ್ತದೆ....!

"ಈ ಚಿತ್ರವನ್ನು ಐದು ಗ್ರೂಪ್‌ಗಳಿಗೆ ಕಳುಹಿಸಿದರೆ ನಿಮ್ಮ ಮೊಬೈಲ್ ಪೋನ್‌ನ ಬ್ಯಾಟರಿ ತಕ್ಷಣ ಪುಲ್ ಚಾರ್ಜ್ ಆಗುತ್ತದೆ" ಎಂದು ಸಂದೇಶ ರವಾನಿಸುವ ಮೂರ್ಖ ವಿಜ್ಞಾನಿಗಳಿಗೇನು ಕಮ್ಮಿ ಇಲ್ಲ...!!

ವೈಚಾರಿಕ ಮತ್ತು ವೈಜ್ಞಾನಿಕ ವಿಷಯಗಳನ್ನು ಕ್ಷಣಾರ್ಧದಲ್ಲಿ ಹಂಚಿಕೊಳ್ಳಬಹುದಾದ, ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅನುಕೂಲಕರವಾದ ಒಂದು ಉತ್ತಮ ವ್ಯವಸ್ಥೆಯಲ್ಲಿ ಇಂಥವರನ್ನು ಪ್ರೋತ್ಸಾಹಿಸದಿರುವುದು ಒಳ್ಳೆಯದು.

ವಿಚಾರವಂತರು ಮತ್ತು ವಿಜ್ಞಾನಿಗಳು ಜಗತ್ತು ಮುಷ್ಟಿಯೊಳಗೆ ಎಂದು ಸಾರ ಹೊರಟರೆ, ಮೂಢರು ಮತ್ತು ಮೂರ್ಖರು ಜಗತ್ತು ಕಪಿಮುಷ್ಟಿಯೊಳಗೆ ಎಂದು ಸಾಧಿಸ ಹೊರಡುತ್ತಾರೆ, ಎಂಥ ವಿಪರ್ಯಾಸ.

# ಬಾಂಧವ್ಯ ಬೆಸೆಯುವಲ್ಲಿ ಅನುವಾದ ಕಾರ್ಯ ಮಹತ್ವದ್ದು

–ಶಿದ್ದರಾಮಪ್ಪ ಕಪ್ಪತ್ತನವರ್

ಮುಂಬೈ ಫೆ. 26 : ಅನುವಾದ ಕಾಯಕ ಬೇರೆ ಬೇರೆ ಭಾಷೆಗಳ ನಡುವಿನ ಬಾಂಧವ್ಯವನ್ನು ಬೆಸೆಯುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ಬಾಂಧ್ಯವ್ಯವನ್ನು ಬೆಸೆಯುತ್ತಿರುವ ಸಾಹಿತಿಗಳನ್ನು ಗುರುತಿಸಿ ಅವರಿಗೆ ಪ್ರಶಸ್ತಿ ನೀಡುತ್ತಿರುವ ಕರ್ನಾಟಕ ಸಂಘ ಮುಂಬಯಿ ಮುಂದಿದ್ದಾರೆ. ಇನ್ನೊಂದು ಸಂಸ್ಕೃತಿಯ ಜೊತೆ ಬೆರೆತು ಕೊಳ್ಳುವ ಹೃದಯ ವೈಶಾಲ್ಯತೆ ಕನ್ನಡಿಗರಲ್ಲಿದೆ. ಇಲ್ಲಿ ಅನುವಾದ ಕಾರ್ಯವೂ ಅಷ್ಟೇ ಮಹತ್ವದ್ದು. ಆದರೆ ಇದು ಬಹಳ ಕಷ್ಟವಾದ ಸಂಗತಿ ಎಂದರಲ್ಲದೆ ಗ್ರಾಮೀಣ ಕ್ಷೇತ್ರಗಳನ್ನು ಹೊಂದಿರುವ ಉತ್ತಮ ಉದ್ದೇಶವಿದೆ. ಇಲ್ಲಿಯ ನೆಲದಲ್ಲಿ ನಮ್ಮ ಸಂಬಂಧವನ್ನು ನಾವು ಗಟ್ಟಿಗೊಳಿಸಬೇಕು. ಆದ್ಯರು ಇದಕ್ಕೆ ಮಹತ್ವ ನೀಡಿದವರು ಎಂದರು.

ಅಧ್ಯಕ್ಷತೆ ವಹಿಸಿದ ಸಂಘದ ಉಪಾಧ್ಯಕ್ಷ ಬಿ. ಜಿ. ನಾಯಕರು ಮಾತನಾಡುತ್ತಾ ಕಳೆದ ಎಂಭತ್ತಮೂರು ವರ್ಷಗಳಿಂದ ಕರ್ನಾಟಕ ಸಂಘ



ಸಂಘದ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್, ಡಾ. ಭರತ್ ಕುಮಾರ್ ಪೊಲಿಪು, ಮಾಜಿ ಅಧ್ಯಕ್ಷರಾದ ಮನೋಹರ ಕೋರಿ, ಉಪಾಧ್ಯಕ್ಷರಾದ ಬಿ. ಜಿ. ನಾಯಕ್. ಸಮಾರಂಭದ ಮುಖ್ಯ ಅತಿಥಿ ಡಾ. ವಿಶ್ವನಾಥ್ ಕಾರ್ನಾಡ್, ಗೌ. ಕೋಶಾಧಿಕಾರಿ ಎಂ. ಡಿ. ರಾವ್, ಸ್ನೇಹ ಸಂಬಂಧ ಸಂಪಾದಕ ಶ್ರೀನಿವಾಸ್ ಜೋಕಟ್ಟೆ

ಪ್ರಶಂಸನೀಯ ಕಾರ್ಯಗಳನ್ನು ಮಾಡುತ್ತಿದೆ. ಕೊಂಡು ಕೊಳ್ಳುವಿಕೆ ಇಂದು ಭಾರತದಂತಹ ದೇಶವನ್ನು ಇನ್ನಷ್ಟು ಸಶಕ್ತ ಗೊಳಿಸಲು ನೆರವಾಗುತ್ತದೆ ಎಂದು ಆದಾಯ ತೆರಿಗೆ ಇಲಾಖೆ ಮುಂಬಯಿ ಇದರ ಜಂಟಿ ಆಯುಕ್ತರಾದ ಶಿದ್ದರಾಮಪ್ಪ ಕಪ್ಪತ್ತನವರ್ ಐ. ಆರ್. ಎಸ್ ಹೇಳಿದರು.

ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘ, ಮುಂಬಯಿ ಇದರ 2015 ನೇ ಸಾಲಿನ ವರದರಾಜ ಆದ್ಯ ಸ್ಮಾರಕ ಪ್ರಶಸ್ತಿ ಪ್ರದಾನ ಸಮಾರಂಭವು ಫೆ. 25ರಂದು ಸಂಜೆ ಡಾ. ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಜರಗಿದಾಗ ಅವರು ಗೌರವ ಅತಿಥಿಯಾಗಿ ಆಗಮಿಸಿ ಮಾತನಾಡಿದರು.

ಕನ್ನಡಿಗರು ಇತರ ಭಾಷೆಗಳ ಜೊತೆಗೆ ಬಾಂಧವ್ಯ ಬೆಸೆಯುವಲ್ಲಿ ಸದಾ ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳಲ್ಲಿ ನುಡಿಗಟ್ಟುಗಳು, ಗಾದೆಗಳು... ಹೀಗೆ ಜನಪದಕ್ಕೆ ಸಂಬಂಧಿಸಿದವುಗಳ ಅನುವಾದವೂ ನಡೆಯುತ್ತಿರಬೇಕು ಎಂದು ಆಶಿಸಿದರು.

ಇದೇ ಸಮಯ ಅವರು ಆನ್ ಲೈನ್ ಪುಸ್ತಕ ಖರೀದಿಯ ಅಗತ್ಯವನ್ನೂ ತಿಳಿಸುತ್ತಾ ಇಂದು ಖರೀದಿಸಿ ಓದುವವರು ಕಡಿಮೆ ಇದ್ದಾರೆ ಎಂಬ ಟೀಕೆಗಳಿವೆ. ಹಾಗಾಗಿ ಆನ್ ಲೈನ್ ನಲ್ಲಿ ಕನ್ನಡ ಪುಸ್ತಕಗಳಲ್ಲಿ ಹೆಚ್ಚೆಚ್ಚು ಸಿಗುವಂತಾಗ ಬೇಕು. ಪುಸ್ತಕ ಮಾರಾಟ ಮಾಡುವವರು ಇತ್ತ ಗಮನಿಸುವಂತಾಗಲಿ ಎಂದರು.

ಮುಖ್ಯ ಅತಿಥಿ ಸಾಹಿತಿ ಡಾ. ವಿಶ್ವನಾಥ ಕಾರ್ನಾಡರು ಸಂಘದ ಈ ಪ್ರತಿಷ್ಟಿತ ಪ್ರಶಸ್ತಿ ಇಂದು ಅರವಿಂದ ಹೆಬ್ಬಾರ್‌ರಿಗೆ ದೊರೆತಿರುವುದು ಸಂತೋಷ ತಂದಿದೆ. ಇದರ ಹಿಂದೆ ಮುಂಬಯಿ ಕನ್ನಡದ ಜೊತೆ ಸ್ಥಳೀಯ ಮರಾಠಿಯವರ ಜೊತೆಗೂ ಉತ್ತಮ ಸಂಬಂಧ ಇರಿಸಿ ಸೌಹಾರ್ದ ವಾತಾವರಣ ಬೆಳೆಸುವಲ್ಲಿ ನಿರಂತರ ಶ್ರಮಿಸುತ್ತಿದೆ. ವರ್ಷವಿಡೀ ಸಾಹಿತ್ಯ – ಸಾಂಸ್ಕೃತಿಕ ಅರ್ಥಪೂರ್ಣ ಯಶಸ್ವಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ತನ್ನ 65 ವರ್ಷ ಪ್ರಾಯದ ನಂತರ ಕರ್ನಾಟಕ ಸಂಘ ಮುಂಬಯಿಯ ಮರಾಠಿ ಕ್ಲಾಸ್‌ನಲ್ಲಿ ಮರಾಠಿ ಕಲಿತು ಇಂದು ಮರಾಠಿಯಲ್ಲಿ ಕನ್ನಡದ ಉತ್ತಮ ಕೃತಿಗಳನ್ನು ಅನುವಾದಿಸುತ್ತಿರುವ ಅರವಿಂದ ಹೆಬ್ಬಾರರಿಗೆ ಈ ಪ್ರಶಸ್ತಿ ಸಂದಿರುವುದು ನಮಗೆಲ್ಲ ಅಭಿಮಾನದ ಸಂಗತಿಯಾಗಿದೆ. ಕರ್ನಾಟಕ ಮಹಾರಾಷ್ಟ್ರ ನೆರೆರಾಜ್ಯಗಳು. ಮರಾಠಿಯಲ್ಲಿ ಭೈರಪ್ಪ ಕಾರಂತರಂತವರು ಪ್ರಸಿದ್ಧಿ ಇರಲು ಅನುವಾದ ಕಾರ್ಯವೇ ಅಲ್ಲಿ ಸಾಧ್ಯವಾಗಿಸಿದೆ ಎಂದರು.

1ನೇ ಪುಟದಿಂದ

ಹಳೆಯ ಕಲೆ, ಸಣ್ಣಪುಟ್ಟ ಗಾಯ, ಸುಟ್ಟಗಾಯ, ನೆರಿಗೆ ಹೀಗೆ ಎಲ್ಲಾ ತೊಂದರೆಗಳಿಗೆ ಲೋಳೆಸರ ಅತ್ಯುತ್ತಮ ಪರಿಹಾರವಾಗಿದೆ.

ಲೋಳೆಸರದಲ್ಲಿ ಚರ್ಮವನ್ನು ಸ್ವಚ್ಛಗೊಳಿಸುವ ಗುಣವಿದೆ. ಇದು ಚರ್ಮದ ರಂಧ್ರಗಳಿರುವ ಸೂಕ್ಷ್ಮಕಣಗಳನ್ನು ನಿವಾರಿಸುತ್ತದೆ. ಮತ್ತೊಂದು ಮುಖ್ಯವಾಗಿ ಕಾಡುವ ತೊಂದರೆ ಎಂದರೆ ಮೊಡವೆ. ಹದಿಹರೆಯದವರಲ್ಲಿ ಹೆಚ್ಚಾಗಿ ಕಾಣುವ ಈ ಸಮಸ್ಯೆಯನ್ನು ನಿವಾರಿಸುವುದು ಸುಲಭದ ಕೆಲಸವಲ್ಲ. ಮೊಡವೆ ಬಂದ ಕೂಡಲೇ ಅದನ್ನು ಚಿಮಟಿ ಮೊಡವೆ

## ಔಷಧೀಯ ಸಸ್ಯ ಲೋಳೆಸರ

ಮುಖಾಂದವಾಯಿತು ಎಂದು ನಿರಾಳವಾಗುವವರು ಇದ್ದಾರೆ. ಆದರೆ ವಾಸ್ತವ್ಯದ ಸಂಗತಿ ಎಂದರೆ ಅದನ್ನು ಚಿವುಟಿದ ಬಳಿಕ ಗಾಯ ಸ್ವಲ್ಪ ದಿನಗಳ ಬಳಿಕ ಒಣಗಿದರೂ ಕಲೆ ಉಳಿಯುತ್ತದೆ. ಲೋಳೆಸರವನ್ನು ನಿರಂತರವಾಗಿ ಹಚ್ಚುತ್ತಾ ಬಂದರೆ ಚರ್ಮದ ಜಿಡ್ಡು ಕಡಿಮೆಯಾಗಿ ಮೊಡವೆಗಳು ಬರುವ ಸಾಧ್ಯತೆ ಕಡಿಮೆಯಾಗುತ್ತದೆ. ಇದರಿಂದ ಮುಖ ನೈಸರ್ಗಿಕ ಚೆಲುವನ್ನು ಪಡೆಯುತ್ತದೆ.

ಸೌಂದರ್ಯದ ಜೊತೆಗೆ ಆರೋಗ್ಯದ ವಿಷಯದಲ್ಲೂ ಲೋಳೆಸರ ಎತ್ತಿದ ಕೈ. ಲೋಳೆಸರವನ್ನು ತಲೆಗೆ ಹಚ್ಚಿಕೊಂಡು ಅರ್ಧಗಂಟೆಯ ನಂತರ ಸ್ನಾನ ಮಾಡುವುದರಿಂದ ಕೂದಲು ಸೊಂಪಾಗಿ ಬೆಳೆಯುತ್ತದೆ ಮತ್ತು ತಲೆಯಲ್ಲಿರುವ ಹೊಟ್ಟು ಕೂಡ ಕಡಿಮೆಯಾಗುತ್ತದೆ. ಅಸಿಡಿಟಿ, ಗ್ಯಾಸ್ಟಿಕ್ ಸಮಸ್ಯೆ ಇರುವವರು ಬೆಳಿಗ್ಗೆ ಹೊತ್ತು ಖಾಲಿ ಹೊಟ್ಟೆಯಲ್ಲಿ ಲೋಳೆಸರ ದ್ರವ್ಯವನ್ನು ಕುಡಿದರೆ ಆ ಸಮಸ್ಯೆಯಿಂದ ಪಾರಾಗಬಹುದು. ಚರ್ಮರೋಗಕ್ಕೆ ದಿವ್ಯಾಔಷಧವಾದ ಲೋಳೆಸರವನ್ನು ದೇಹದಲ್ಲಿ ಊತವಿದ್ದ ಭಾಗಕ್ಕೆ ಹಚ್ಚಿದರೆ ಕ್ರಮೇಣ ಊತ ಕಡಿಮೆಯಾಗುತ್ತದೆ. ಜೊತೆಗೆ ಲೋಳೆಸರವನ್ನು ಸ್ವಲ್ಪ ಪ್ರಮಾಣದಲ್ಲಿ ಸೇವಿಸುವುದರಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.

# ವಾಪಿ ಕನ್ನಡ ಸಂಘದ 36ನೇ ವಾರ್ಷಿಕೋತ್ಸವ




ವಾಪಿ : ಜನ್ಮಕೊಟ್ಟ ಮಾತೆ, ಜನ್ಮಕೊಟ್ಟ ಸ್ಥಳ, ಜನ್ಮಕೊಟ್ಟ ಸಂಸ್ಥೆ ಈ ಮೂರೂ ಭಗವಂತನಿಗಿಂತಲೂ ಶ್ರೇಷ್ಠ. ಈ ವಾಪಿ ಕನ್ನಡ ಸಂಘ, ಇಲ್ಲಿಯ ಮನಸ್ಸುಗಳು, ಸಮಸ್ಥ ಕಾರ್ಯಕಾರೀ ಸಮಿತಿಯು ತತ್ಪರತೆಯಿಂದಕೂಡಿದ ಶ್ರೇಷ್ಠ ಸಂಸ್ಥೆಯಾಗಿದೆ. ಕನ್ನಡವು ಎಂಟು ಜ್ಞಾನ ಪೀಠ ಪ್ರಶಸ್ತಿ ಹಾಗೂ ಹಲವಾರು ಪ್ರಶಸ್ತಿಗಳಿಂದಸಮೃದ್ಧಿಯಾಗಿದ್ದು ಕನ್ನಡಿಗರಿಲ್ಲದ ಪ್ರದೇಶವಿಲ್ಲ ಎಂದು ವಾಪಿ ಕನ್ನಡ ಸಂಘದ 36ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮುಖ್ಯ ಅತಿಥಿಗಳ ಸ್ಥಾನದಿಂದ ಮುಂಬಯಿಯಯಕ್ಷಗಾನಕಲಾವಿದ, ವಿಮರ್ಶಕ ಸಾಹಿತಿಗಳಾದ ಶ್ರೀ ಕೋಲ್ಯಾರುರಾಜು ಶೆಟ್ಟಿಯವರು ಮಾತನಾಡಿದರು.

ಮುಖ್ಯಅತಿಥಿ ಕೋಲ್ಯಾರುರಾಜು ಶೆಟ್ಟಿ, ಸಂಘದ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ, ವಿಶ್ವಸ್ಥ ಸಂಜಯ ಮರ್ಬಳ್ಳಿ, ಗೌ.ಕಾರ್ಯದರ್ಶಿ ರಾಜು ಶೆಟ್ಟಿ, ಕಾರ್ಯಾಧ್ಯಕ್ಷ ನಾಗರಾಜ್ ಶೆಟ್ಟಿ, ಕೋಶಾಧಿಕಾರಿ ಆರ್.ವಿ.ಶ್ರೀನಿವಾಸ್ ಮತ್ತು ಮಹಿಳಾ ಮುಖ್ಯಸ್ಥೆ ವನಿತಾ ಪ್ರಭು ಅವರು ದೀಪ ಪ್ರಜ್ವಲಿಸಿದ ನಂತರ ಜಾನಕಿರಾವ್ಅವರು ಪ್ರಾರ್ಥನೆಗೈದರು.ಟಿ.ಕೆ.ವಿನಯಕುಮಾರ, ಸಂಜಯ ಮರ್ಬಳ್ಳಿ ಮತ್ತುಕಿಶೋರ್ ಪ್ರಯಾಗ್ಅವರಿಂದಕನ್ನಡ ಸ್ಫೂರ್ತಿಗೀತೆ 'ಬಾರಿಸುಕನ್ನಡಡಿಂಡಿಮವ' ಪ್ರಸ್ತುತಿಯ ನಂತರ ಅಧ್ಯಕ್ಷರು ಗಣ್ಯರನ್ನು ಸ್ವಾಗತಿಸಿದರು. ಟಿ.ಕೆ.ವಿನಯಕುಮಾರಅಗಲಿದ ಚೇತನಗಳಿಗೆ ಶ್ರದ್ಧಾಂಜಲಿ ಅರ್ಪಿಸಿದರೆ ಕಾರ್ಯದರ್ಶಿ ರಾಜು ಶೆಟ್ಟಿ ವಾರ್ಷಿಕ ವರದಿ ಮತ್ತುಕೋಶಾಧಿಕಾರಿ ಆರ್.ವಿ.ಶ್ರೀನಿವಾಸ ಅಂದಾಜು ಲೆಕ್ಕ-ಪತ್ರಮಂಡಿಸಿದರು. ಕಾರ್ಯಕ್ರಮದ ಯಶಸ್ಸುಕೋರಿ ಬಂದ ಸಂದೇಶಗಳನ್ನು ಪ್ರತಿಭಾ ಪ್ರಯಾಗ ಓದಿದ ನಂತರ ಮುಖ್ಯಅತಿಥಿಕೋಲ್ಯಾರುರಾಜು ಶೆಟ್ಟಿಯವರನ್ನು ವಿಶ್ವಸ್ಥ ಪಿ.ಎಸ್.ಕಾರಂತ ಸಭೆಗೆ ಪರಿಚಯಿಸಿದರು.

ಸಂಘದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮತ್ತು ಹಲವಾರು ಮ್ಯಾರಥೊನ್‌ಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿ ಗಳಿಸಿದ ಕೆ.ಪಿ.ಹೆಬ್ಬೆ ಮತ್ತು ಪ್ರತಿಮಾ ಹೆಬ್ಬೆ ದಂಪತಿಗಳನ್ನು ಈ ಸಂದರ್ಭದಲ್ಲಿ ವಿಶ್ವಸ್ಥಎನ್.ಪಿ.ಕಾಂಚನ್ ಮತ್ತು ವೇದಾ ಕಾಂಚನ ಸನ್ಮಾನಿಸಿದರು. ಎಲ್ಲ ಉಪಸಮಿತಿಗಳ ಸಂಚಾಲಕರನ್ನುಅಧ್ಯಕ್ಷ ಬಾಲಕೃಷ್ಣ ಸನ್ಮಾನಿಸಿದರೆ ನೂತನ ವಿಶ್ವಸ್ಥರಾಗಿ ಆಯ್ಕೆಯಾದ ಸಂಜಯ ಮರ್ಬಳ್ಳಿಯವರನ್ನು ವೇದಿಕೆಗೆ ಕರೆದು ವಿಶ್ವಸ್ಥ ಎನ್.ಎಮ್.ಶೆಟ್ಟಿ ಗೌರವಿಸಿದರು. ಪ್ರಸ್ತುತ ವರ್ಷ ಸಂಘಕ್ಕೆ ಸೇರ್ಪಡೆಯಾದ ಸದಸ್ಯರನ್ನು ವಿಶ್ವಸ್ಥ ಸಂಜಯ ಮರ್ಬಳ್ಳಿಯವರು ವೇದಿಕೆಗೆ ಕರೆದು ಗೌರವಿಸಿದರು.ರಂಗೋಲಿ, ಚಿತ್ರಕಲೆ ಮತ್ತು ಆಟೋಟ ಸ್ಪರ್ಧೆಯ ವಿಜೇತರಿಗೆಮುಖ್ಯಅತಿಥಿಕೋಲ್ಯಾರುರಾಜು ಶೆಟ್ಟಿ ಬಹುಮಾನ ವಿತರಣೆ ನಂತರ ಮಹಿಳಾ ಮುಖ್ಯಸ್ಥೆತಮ್ಮಕಾರ್ಯ ಸಾಧನೆಯ ಬಗ್ಗೆ ಮಾತನಾಡಿದರು.

ಮುಖ್ಯಅತಿಥಿಕೋಲ್ಯಾರುರಾಜು ಶೆಟ್ಟಿ ಮತ್ತು ಅವರ ಧರ್ಮ ಪತ್ನಿ ಶೋಭಾ ಶೆಟ್ಟಿ ದಂಪತಿಗಳನ್ನು ಶಾಲು, ಫಲತಾಂಬೂಲ, ನೆನಪಿನ ಕಾಣಿಕೆ ಮತ್ತು ಸನ್ಮಾನ ಪತ್ರ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿವೇದಿಕೆಯಮೇಲಿನ ಗಣ್ಯರೊಂದಿಗೆಚಂದ್ರಶೇಖರ ಗೋಸಿ, ಜಿ.ಶಶಿಧರ್, ಎನ್.ಎಮ್.ಶೆಟ್ಟಿ, ನಿಶಾ ಶೆಟ್ಟಿ ಹಾಗೂ ಮಲ್ಹಾರ ನಿಂಬರಗಿ ಪಾಲ್ಗೊಂಡಿದ್ದರು. ಸಂಚಾಲಕ ನಾಗರಾಜ್ ಶೆಟ್ಟಿಕಾರ್ಯಕ್ರಮದ ಸಫಲತೆಗೆ ಸಹಕರಿಸಿದ ಎಲ್ಲರನ್ನುಅಭಿನಂದಿಸುತ್ತಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚೆಚ್ಚು ಸದಸ್ಯರು ಭಾಗವಹಿಸುತ್ತಿರಬೇಕೆಂದು ವಿನಂತಿಸಿದರು, ಕೊನೆಯಲ್ಲಿಅಧ್ಯಕ್ಷ ಬಾಲಕೃಷ್ಣ ಶೆಟ್ಟಿ ಮಾತನಾಡುತ್ತ 36ವಸಂತಗಳನ್ನು ದಾಟಿದ ಈ ಸಂಘ ಭದ್ರ ಬುನಾದಿಯಲ್ಲಿ ಬೆಳೆದು ಬಂದುಕನ್ನಡ ಪರ ಅನೇಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದುತಾನುಅಧ್ಯಕ್ಷ ಸ್ಥಾನದಲ್ಲಿದುದಕ್ಕೆ ಹೆಮ್ಮೆ ಎನಿಸುತ್ತಿದೆಎಂದು ಮನಬಿಚ್ಚಿ ಮಾತನಾಡಿದರು.

ಪ್ರೀತಿ ಭೋಜನದ ನಂತರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳುಸಂಘದ ಸದಸ್ಯರಿಂದನೆರವೇರಿದವು.ಗೀತಾಕರಮುಡಿ ವಂದನಾರ್ಪಣೆನೀಡಿದರು. ಸಾಂಸ್ಕೃತಿಕಕಾರ್ಯಕ್ರಮದ ನಿರೂಪಕರಾಗಿ ಶುಭದಾ ಗೋಸಿ, ರೂಪಾ ಸೊಗ್ಲಿ ಮತ್ತು ಮೇಘನಾ ಗೋಸಿ ಮಾಡಿದರೆ ಸಭಾಕಾರ್ಯಕ್ರಮದ ನಿರೂಪಣೆಯಜವಾಬ್ದಾರಿ ಮಮತಾ ಮಲ್ಹಾರ್ ಮತ್ತು ಮಲ್ಹಾರ್ ನಿಂಬರಗಿಯವರುನಿರ್ವಹಿಸಿದರು.ವಾಪಿ, ದಮನ ಮತ್ತು ಸಿಲ್ವಾಸ್ ಪರಿಸರದಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.ಕೊನೆಯಲ್ಲಿ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

**– ಮಮತಾ ಮಲ್ಹಾರ್**




**1ನೇ ಪುಟದಿಂದ**

ರಂಜಿನಿ, ಚಂಪಕ, ಡಾ॥ ಬಾಬು, ರೂಪಾ ಶಾಸ್ತ್ರಿ, ಹಾಡುಗಳು, ಹಾಗೂ ಸಮೂಹ ಗಾಯನವನ್ನು ಮೇಲಿನವರೆಲ್ಲರೊಡಗೂಡಿ ಇತರೆ ಸದಸ್ಯರಾದ ರಮಾ ಸದಾಶಿವ್, ಜ್ಯೋತಿ, ವರ್ಣೇಕರ್, ಸುಮಿತಾ, ಚಿತ್ರಾ, ಸೇರಿಕೊಂಡು ಹಾಡುಗಳನ್ನು ಹಾಡಿ ರಂಜಿಸಿದರು.

ಫೆಬ್ರವರಿಯಲ್ಲಿ ಹುಟ್ಟಿದವರ ಜನ್ಮ ದಿನಾಚರಣೆ ಆಚರಿಸಲಾಯಿತು. ನಂತರ ಮಹಿಳಾ ಮಣಿಗಳ ಬುತ್ತಿಯೂಟದ ರಸಗವಳದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಸಂಘದ ಕೇಂದ್ರ ಸಮಿತಿಯ ಅಧ್ಯಕ್ಷರಾದ, ಶ್ರೀ ಡಾ॥ ಬಾಬು, ಉಪಾಧ್ಯಕ್ಷರಾದ ಶ್ರೀಮತಿ ಶೋಭಾ ಶ್ರಾಫ್, ಕಾರ್ಯದರ್ಶಿಗಳಾದ ಶ್ರೀ ಸುಧೀರ್, ಉಪ ಕಾರ್ಯದರ್ಶಿಗಳಾದ ಜ್ಯೋತಿ ವರ್ಣೇಕರ್, ಖಜಾಂಚಿಗಳಾದ ಶ್ರೀ ಹರ್ಷ ನರಸಿಂಹ, ಹಾಗೂ ಉಪ ಖಜಾಂಚಿಗಳಾದ ಶ್ರೀಮತಿ ಶ್ಯಾಮಲಾರವರ ಕಾರ್ಯವೈಖರಿಗೆ ಸಂಘದ ಹಲವು ಸದಸ್ಯರಿಂದ ಶ್ಲಾಘನೀಯ ಮಾತುಗಳು ಕೇಳಿ ಬಂದವು.

ಕಾರ್ಯಕ್ರಮದ ಯಶಸ್ವಿಗೆ ಪ್ರತ್ಯಕ್ಷರಾದ ಹಾಗೂ ಪರೋಕ್ಷವಾಗಿ ಕಾರಣೀಭೂತರಾದ ಎಲ್ಲರಿಗೂ ವೈಯಕ್ತಿಕವಾಗಿ ಹಾಗೂ ಸಂಘದ ವತಿಯಿಂದ ಧನ್ಯವಾದ ನೀಡಲಾಯಿತು.

**– ಡಾ॥ ಬಾಬು**


# ಶಿವರಾಮು ಕಾಸರಗೋಡು ಅವರಿಗೆ ಅಂಬೇಡ್ಕರ್ ಪ್ರಶಸ್ತಿ

ಕಾಸರಗೋಡು : ಬೆಂಗಳೂರಿನ ವಿ.ಕೆ. ಎಂ. ಕಲಾವಿದರು ಇದರ 35ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ ಡಾ। ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಂ ಸ್ಮಾರಕ ನಾಟಕೋತ್ಸವ ಹಾಗೂ ರಾಜ್ಯ ಮಟ್ಟದ ಸಾಂಸ್ಕೃತಿಕ ಕಲಾಮೇಳದಲ್ಲಿ ಕಾಸರಗೋಡಿನ ಸಾಧಕರಿಗೆ ಬಿ.ಆರ್.ಅಂಬೇಡ್ಕರ್ ಮತ್ತು ಸಿದ್ಧಾರ್ಥ ಪ್ರಶಸ್ತಿಯಿತ್ತು ಸಮ್ಮಾನಿಸಿ ಗೌರವಿಸಲಾಯಿತು.

ಕಾಸರಗೋಡು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಶಿವರಾಮು ಕಾಸರಗೋಡು ಮತ್ತು ಪತ್ರಕರ್ತ ಪ್ರದೀಪ್ ಬೇಕಲ್ ಅವರಿಗೆ ಡಾ। ಅಂಬೇಡ್ಕರ್ ಪ್ರಶಸ್ತಿ ಹಾಗೂ ಸಮಾಜ ಸೇವೆಗಾಗಿ ಕೆ. ಜಗದೀಶ್ ಕೂಡ್ಲು, ಪುರುಷೋತ್ತಮ ಎಂ. ನ್ಯಾಕ್, ರಂಗಭೂಮಿ ಸಾಧನೆಗಾಗಿ ದಿವಾಕರ ಪಿ. ಅಶೋಕನಗರ, ಸಂಘಟನೆಗಾಗಿ ಕೆ. ಗುರುಪ್ರಸಾದ್ ಕೋಟೆಕಣಿ ಮತ್ತು ಛಾಯಾಚಿತ್ರಕ್ಕಾಗಿ ಶ್ರೀಕಾಂತ್ ಕಾಸರಗೋಡು ಅವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ। ಎಲ್. ಹನುಮಂತಯ್ಯ ಮತ್ತು ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ನಾರಾಯಣ ಅವರು ಶಾಲು ಹೊದಿಸಿ, ಸ್ಮರಣಿಕೆ ಹೂ ಹಾರದೊಂದಿಗೆ ಬಿ.ಆರ್ ಅಂಬೇಡ್ಕರ್ ಪ್ರಶಸ್ತಿ ಮತ್ತು ಸಿದ್ಧಾರ್ಥ ಪ್ರಶಸ್ತಿ ಪ್ರದಾನ ಮಾಡಿದರು.

ಕಾರ್ಯಕ್ರಮದಲ್ಲಿ ಸರ್ಕಾರದ ಸಾಲ ವಸೂಲಾತಿ ಪ್ರಾಧಿಕಾರದ ಸಿ.ಆರ್. ಬೆನಕಹಳ್ಳಿ ಅಧ್ಯಕ್ಷತೆ ವಹಿಸಿದರು. ಮುಖ್ಯ ಅತಿಥಿಯಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಎಸ್. ಶಾಂತಾರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಜಿ ನಿರ್ದೇಶಕ ಮನು ಬಳಿಗಾರ್, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಸದಸ್ಯ ವಿಠ್ಠಲ ಕೊಪ್ಪದ್, ಲೋಕೋಪಯೋಗಿ ಅಧೀಕ್ಷಕ ಅಭಿಯಂತರ ಮಲ್ಲಿಕಾರ್ಜುನ ಕೆ. ಸಂಗಾವಿ, ಬಿ.ಬಿ.ಎಂ.ಪಿ. ಸದಸ್ಯ ಚಂದ್ರಪ್ಪ ರೆಡ್ಡಿ, ಬೆಂಗಳೂರು ದೂರದರ್ಶನ ಕೇಂದ್ರದ ನಿವೃತ್ತ ನಿರ್ದೇಶಕ ಜಿ.ಎಂ. ಶಿರಹಟ್ಟಿ ಉಪಸ್ಥಿತರಿದ್ದರು. ಆ ಬಳಿಕ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ವಿ.ಕೆ.ಎಂ. ಕಲಾವಿದರು ಇದರ ಪ್ರಧಾನ ಕಾರ್ಯದರ್ಶಿ ಸಿ.ಎಂ. ತಿಮ್ಮಯ್ಯ ಬೆಂಗಳೂರು ಕಾರ್ಯಕ್ರಮ ನಿರೂಪಿಸಿದರು.






## ಲೇಖಕರ ಗಮನಕ್ಕೆ

ಹೊಸ ಕೃತಿಗಳನ್ನು ಪ್ರಕಟಿಸುವವರು ಹೃದಯವಾಹಿನಿ ಪ್ರಕಾಶನವನ್ನು ಸಂಪರ್ಕಿಸಬಹುದು. ಈಗಾಗಲೇ ಕೃತಿಗಳನ್ನು ಪ್ರಕಟಿಸಿದವರು, ಕೃತಿಯ ಕುರಿತು ಅಂಕಣದ ಪ್ರಯೋಜನ ಪಡೆಯಲಿಚ್ಛಿಸುವವರು 2 ಪ್ರತಿಗಳನ್ನು ಕಳುಹಿಸಬೇಕು.

# ತುಳುಭಾಷೆ : ಸಂಕುಚಿತ ಬೇಡ; ಮೀರಜ್‌ನಲ್ಲಿ ತುಳು ಉತ್ಸವ



ಮೀರಜ್ : ಮಾ. 23 : ಪಂಚದ್ರಾವಿಡ ಭಾಷೆಗಳಲ್ಲಿ ಸಂಪದ್ಭರಿತವಾಗಿರುವ ತುಳು ಭಾಷೆ, ಸಾಹಿತ್ಯ, ಸಂಸ್ಕೃತಿ ಅಳಿವಿನ ಅಂಚಿನಲ್ಲಿದೆ ಮತ್ತು ತುಳುವಿನ ಭವಿಷ್ಯ ಚಿಂತಾಜನಕವಾಗಿದೆ ಹಾಗೂ ತುಳು ಬೆಳೆಸುವುದು ಗೌರವಕ್ಕೆ ಕುಂದು ಎಂಬ ಸಂಕುಚಿತ ಮನೋಭಾವವನ್ನು ತೊರೆದು ತುಳು ಸಂಸ್ಕೃತಿ ಇದೀಗ ಸುವರ್ಣಯುಗಕ್ಕೆ ಕಾಲಿಡುತ್ತಿದೆ ಎಂಬ ಧೋರಣೆಯನ್ನು ತಾಳಿ ತುಳುವರು ಹೆಮ್ಮೆ ಪಡಬೇಕೆಂದು "ತುಳುವೆರ್" ಮತ್ತು "ದೆಹಲಿ ಕನ್ನಡಿಗ" ಪತ್ರಿಕೆಗಳ ಸಂಪಾದಕ ಬಾ. ಸಾಮಗ ಅವರು ಕರೆ ನೀಡಿದರು.

ಸಾಮಗ ಅವರು ಕರ್ನಾಟಕ ತುಳುನಾಡ್ ಸಂಘ ಈಚೆಗೆ ಮೀರಜ್‌ನಲ್ಲಿ ಏರ್ಪಡಿಸಿದ್ದ 27ನೇ ತುಳು ಸಾಂಸ್ಕೃತಿಕ ಉತ್ಸವದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ತುಳುನಾಡು ಹಾಗೂ ಹೊರನಾಡಿನಲ್ಲಿ ಇದೀಗ ತುಳು ಚಟುವಟಿಕೆಗಳು ವ್ಯಾಪಕವಾಗಿ ನಡೆಯುತ್ತಿದ್ದು ವಿಶ್ವದಲ್ಲೇ ತುಳುವಿಗೆ ಗೌರವ ಸ್ಥಾನ ಲಭಿಸುತ್ತಿದೆ ಎಂದ ಸಾಮಗ ಗಣೇಶ್ ರೈ, ಉಮೇಶ್ ಶೆಟ್ಟಿ, ಸದಾಶಿವ ಶೆಟ್ಟಿ, ಕೇಶವ ರಾವ್, ದಿವಾಕರ ಶೆಟ್ಟಿ, ಶ್ರೀಮತಿ ಅರ್ಚನಾ ಶೆಟ್ಟಿ, ವಿಶಾಲ ಶೆಟ್ಟಿ ಉಪಸ್ಥಿತರಿದ್ದರು. ತುಳುವಿನ ಜಾನಪದ ನೃತ್ಯಗಳು, ನೃತ್ಯರೂಪಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ತುಳುನಾಡಿನ ತಿಂಡಿ ತಿನಿಸುಗಳ ಔತಣಕೂಟ ಏರ್ಪಡಿಸಲಾಗಿತ್ತು.

# ಬೊಂಬೆಯಾಟ ಕಲಾವಿದ ಕೆ.ವಿ. ರಮೇಶರಿಗೆ ಸನ್ಮಾನ

ಕಾಸರಗೋಡು : ತೆಂಕುತಿಟ್ಟು ಯಕ್ಷಗಾನ ಬೊಂಬೆಯಾಟ ಸೂತ್ರಧಾರಿ, ಕೇರಳ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೆ.ವಿ. ರಮೇಶ ಅವರನ್ನು ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಹಾಲಿ ಸಂಸದ ಬಿ.ಯಸ್. ಯಡಿಯೂರಪ್ಪ ಸನ್ಮಾನಿಸಿದರು. ನಗರಸಭಾ ಸಭಾಂಗಣದಲ್ಲಿ ವಿವೇಕಾನಂದ ಎಜ್ಯುಕೇಶನಲ್ ಆಂಡ್ ಚಾರಿಟೇಬಲ್ ಟ್ರಸ್ಟ್‌ನ ಉದ್ಘಾಟನಾ ಸಮಾರಂಭದಲ್ಲಿ ಯಡಿಯೂರಪ್ಪ ಅವರು ರಮೇಶರನ್ನು ಸನ್ಮಾನಿಸಿ ಅಭಿನಂದಿಸಿದರು. ಟ್ರಸ್ಟ್‌ನ ಅಧ್ಯಕ್ಷ ಯನ್. ಸತೀಶನ್ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಸಂಸದೆ ಶೋಭಾ ಕರಂದ್ಲಾಜೆ, ಆರ್.ಎಸ್.ಎಸ್. ಕೇರಳ ಪ್ರಾಂತ್ಯ ಸಹ ಸಂಘಚಾಲಕ್ ನ್ಯಾಯವಾದಿ ಕೆ.ಕೆ. ಬಲರಾವ್, ಬಿ.ಜೆ.ಪಿ. ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಸುರೇಂದ್ರನ್, ಆರ್.ಎಸ್.ಎಸ್. ದಕ್ಷಿಣ ಕ್ಷೇತ್ರೀಯ ಸೇವಾ ಪ್ರಮುಖ್ ಗೋಪಾಲ ಚೆಟ್ಟಿಯಾರ್ ಸಹಿತ ಗಣ್ಯರು ಉಪಸ್ಥಿತರಿದ್ದರು. ಕಾಸರಗೋಡು ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟಸಂಘದ ನಿರ್ದೇಶಕರೂ, ಪ್ರಧಾನ ಸೂತ್ರಧಾರಿಯೂ ಆಗಿರುವ ಕೆ.ವಿ. ರಮೇಶ ಅವರು ತೆಂಕುತಿಟ್ಟು ಯಕ್ಷಗಾನ ಬೊಂಬೆಯಾಟಕ್ಕೆ ಕಾಯಕಲ್ಪ ನೀಡುತ್ತಿರುವವರು. ಈಗಾಗಲೇ ದೇಶ-ವಿದೇಶಗಳಲ್ಲಿ ಮೂರುಸಾವಿರಕ್ಕೂ ಅಧಿಕ ಬೊಂಬೆಯಾಟ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಯನ್ನು ನೀಡಿದ್ದಾರೆ. 2010ರಲ್ಲಿ ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಅವರು ಬಿ.ಯಸ್. ಯಡಿಯೂರಪ್ಪ ಅವರಿಂದ ಸ್ವೀಕರಿಸಿದ್ದರು. ಅಂತಾರಾಷ್ಟ್ರೀಯ ಮಟ್ಟದ ಬೊಂಬೆಯಾಟ ಉತ್ಸವಗಳಲ್ಲಿ ಭಾಗವಹಿಸಿ ಜಾಗತಿಕ ಮಟ್ಟದ ಪ್ರಶಸ್ತಿ ಪುರಸ್ಕಾರವನ್ನು ಪಡೆದ ಹೆಗ್ಗಳಿಕೆ ಅವರದು.



ಹಾಂಗ್‌ಕಾಂಗ್ : ಮಾರ್ಚ್ 12ರಂದು ಕನ್ನಡ ಸಂಘ ಹಾಂಗ್‌ಕಾಂಗ್‌ನ ಮಹಿಳಾ ಸದಸ್ಯರಿಂದ ಮಹಿಳಾ ದಿನಾಚರಣೆ ಮತ್ತು ಕುಟುಂಬ ರಸಮಂಜರಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.



## ಕುಡಲ

"ಕುಡಲ"ವೆಂಬೊಂದು ನಿಯತಕಾಲಿಕ ವೀಗ ।
ಕುಡಲದೊಡಲಿಂದ ಲೇ ಪೊಡ ಮಡುತಲಿಹುದು ॥
ಅಂದಪ್ಪೆ – ಉಂದೊಂಜಿ ನಮ ಭಾಸೆಡೆ ಉಂಡು ।
ಎಂದೆ ಪನ್ಪಿನ ಬಿರ್‌ಸತ್ತ್ ನಮೊ ದೀಡೊಂತೊ ।
ಎಂದ್ ಪನೋಡತ್ತೇ ॥
ಮೂಲ ಬಾಸೆನ್ ನಮೋ ಮೂಲೆಗೇ ಮಲ್ತ್‌ಂಡ
ಕಾಲರುದ್ರೆ ನಂಕ್ ಪೋಕಾಲೋ ಪನಾಂದೊ ॥
ಆಲ್ ಉಂಬಾಲ್‌ಂದ್ ನಮೊ ದಾಯೆ ಪನೋಡಪ್ಪೆ
ಮೂಲೆ ಬಲ ಆಶೀರ್ವಾದೊ ಕೊರ್ಕ ಪಂಡಾರೊ ॥



## ಜೀವನ ಶಿಕ್ಷಣ

ಜೀವನ ಶಿಕ್ಷಣ ಬೇಕೇ ನಿಮಗೆ ।
ಈವೆನು ಈ ಯಕ್ಷಗಾನದ ಕೊಡುಗೆ ॥
ಅಕ್ಷಯ ಪಾತ್ರೆಯ ತೆರದಲಿ ಇಹುದು ।
ದಕ್ಷ ರೀತಿಯ ಶಿಕ್ಷಣವಹುದು ॥
ಕುಂಬಳೆ ಸೀಮೆಯ ಬೆಂಬಲವಿರುವ ।
ಕಣಿಪುರ ಕೃಷ್ಣನ ಹೆಸರಲ್ಲಿರುವ ॥
ಕಣಿಪುರೆಶ ನಾರಾಯಣ ನಡೆಸುವ ।
"ಕಣಿಪುರ" ಎಂದೆನ್ನುವ ಈ ನಿಯತಕಾಲಿಕೆಯು ॥
ಇರಲಿ ನಿಮ್ಮ ಬಳಿ ಈ ಪತ್ರಿಕೆಯು ।
ತರಲಿ ನಮಗೆ ಹಲವಾರು ತರದ ನೆರವು ॥
ಜೀವನ ಶಿಕ್ಷಣ ಬೇಕೇ ನಿಮಗೆ ।
ಈವೆನು ಈ ಯಕ್ಷಗಾನದ ಕೊಡುಗೆ ॥
ಸರ್ವೋದಯದ ಹಾದಿ ।
ಸರಿಗೊಂಡಿತೀಗ ॥
ಸರ್ವೇ ಜನ ಸುಖಿನೋ ।
ಭವಂತು ಎಂಬಾಗ ॥
ಸರ್ವರಿಗು ಪರಿಪಾಠ ।
ಹೊಂದಿಕೊಂಡಾ ವೇಳೆ ॥
ಸರ್ವರಿಗು ಶುಭ ಘಳಿಗೆ ॥
ಸರ್ವೋದಯದ ಹಾದಿ ಸರಿಗೊಂಡಿತೀಗ


**– ಕಿರಿಕ್ಕಾಡು ವನಮಾಲಾ ಕೇಶವ ಭಟ್ಟ**

## ಅಲಕ್ಷ್ಯಕ್ಕಿರಲಿ ಅಂಕೆ

**– ಅನಸೂಯ ಹೆಸರಘಟ್ಟ**



ನೀರು ನೀರೆಂದು ಜರಿ ಬೇಡ್ತಿ
ನೀರಿದ್ದರೇನೆ ಜೀವ ಕಣ್ರಿ
ನೀರಿಗು ಸುಂಕ ತೆರಬೇಕ್ರಿ
ಪಳ್ಳ ಲೆಕ್ಕ ಚುಕ್ಕ ಇಡಬೇಕ್ರಿ
ನೀರಿಗೆ ಆಹಾಕಾರ ಬಂದೋಯ್ತಿ
ಭೂಮಿ ಕೊರೆವುದ ಬಿಡಬೇಕ್ರಿ
ಪರಿಸರದ ದುಳುವಿಗೆ ದುಡಿಬೇಕ್ರಿ
ಮಳೆ ಬೀಜ ಭೂಮಿಲಿ ಬಿತ್ತಬೇಕ್ರಿ
ಹುಲುಸಾದ ಪಸಲು ತೆಗಿಬೇಕ್ರಿ
ಖಗಮೃಗ ಪಕ್ಕದಲಿರಬೇಕ್ರಿ
ನದಿ ನೀರು ಜೋಡಣೆ ಆಗಬೇಕ್ರಿ
ಬರಗಾಲದ್ದೂರಿಗೆ ಕೊಡಬೇಕ್ರಿ
ನದಿ ಕೆರೆ ಕಾಲುವೆ ಉಳಿಸಬೇಕ್ರಿ
ನೀರಿನ ಜಾಡನು ಬೆಳೆಸಬೇಕ್ರಿ
ಬಾನು ಭುವಿಗೆ ಕಮಾನುಕಟ್ಟಿ
ಜಲಸಿರಿ ಭೂಮಿಗೆ ಬರತೈತ್ರಿ
ದೀಪಗಾಣದ್ದೂರಿಗೆ ಬೆಳಕು ಬೇಕ್ರಿ
ನೀರಿಂದ ವಿದ್ಯುತ್ ಅಲ್ಲವೇನ್ರಿ?
ನೀರಿನ ವ್ಯಾಜ್ಯ ಅಂತರ ರಾಜ್ಯ
ಪೈಪೋಟಿ ಬಿದ್ದು ಕಟಕಟೆಯಲ್ಲಿ
ಕಳಸ ಬಂಡೂರಿ ಮಹದಾಯಿ
ನೆನೆಗುದಿ ಪ್ರತ್ಯಾರೋಪ ಬಂದೋಯ್ತಿ
ಹುಬ್ಬಳ್ಳಿ ನವಲಗುಂದ ಕಲಘಟಕ
ಕಾವತ್ರಿ ಉರಿದು ಕಮರೋಯ್ತಿ
ಸರ್ಕಾರಿ ಕಿಮ್ಮತ್ತು ಹಕೇಕತ್ತು
ಅರಣ್ಯರೋದನ ಹತಾಶ ಮಂದಿಗೆ
ನೀರೆಂದು ಕೇಳಿದ ರೈತಾಪಿ ಮಂದಿಗೆ
ಲಾಟಿ ಪ್ರಹಾರ ಆಗೋಯ್ತಿ



# ಭಾರತ್ ಬ್ಯಾಂಕ್‌ನ ಭಗೀರಥ ಸಾಧನೆಗೆ ಬಹುಶ್ರೇಷ್ಠ ಬ್ಯಾಂಕ್ ಗೌರವ



ಮುಂಬಯಿ, ಮಾ.22: ಸಹಕಾರಿ ರಂಗದ ಆರ್ಥಿಕ ಸೇವೆಯಲ್ಲಿ ರಾಷ್ಟ್ರದಾದ್ಯಂತ ಪ್ರಸಿದ್ಧಿ ಪಡೆದ ತುಳು-ಕನ್ನಡಿಗರ ಪ್ರತಿಷ್ಠಿತ ಹಣಕಾಸು ಸಂಸ್ಥೆ ದಿ.ಭಾರತ್ ಕೋ.ಅಪರೇಟಿವ್ ಬ್ಯಾಂಕ್ (ಮುಂಬಯಿ) ಲಿಮಿಟೆಡ್ ಸಂಸ್ಥೆಗೆ ಮುಂಬಯಿ ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕ್ (ರಿ.) ಸಂಸ್ಥೆಯ 'ಮುಂಬಯಿ ಬ್ಯಾಂಕ್ ಸಹಕಾರ್ ಪುರಸ್ಕಾರ್' ಪ್ರಾಪ್ತಿಯಾಗಿದ್ದು, ಇಂದಿಲ್ಲಿ ಮಂಗಳವಾರ ಸಂಜೆ ಮಾಟುಂಗಾ ಪಶ್ಚಿಮದ ಅಖಿಲ ಭಾರತೀಯ ಮರಾಠಿ ನಾಟ್ಯ ಪರಿಷದ್ ಇದರ ಯಶವಂತ ನಾಟ್ಯ ಮಂದಿರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಪುರಸ್ಕಾರ ಪ್ರದಾನಿಸಿ ಗೌರವಿಸಿತು.

ಜಿಲ್ಲಾ ಸಹಕಾರಿ ಬ್ಯಾಂಕ್ ಅಧ್ಯಕ್ಷ ಪ್ರವೀಣ್ ಯಶವಂತ್ ದರೇಕರ್ ಅವರಿಂದ ಭಾರತ್ ಬ್ಯಾಂಕ್‌ನ ಕಾರ್ಯಾಧ್ಯಕ್ಷ ಜಯ ಸಿ.ಸುವರ್ಣ, ಉಪ ಕಾರ್ಯಾಧ್ಯಕ್ಷೆ ನ್ಯಾ| ರೋಹಿಣಿ ಜೆ.ಸಾಲಿಯಾನ್ ಮತ್ತು ಆಡಳಿತ ನಿರ್ದೇಶಕ ಸಿ.ಆರ್ ಮೂಲ್ಕಿ (ಸಿಇಒ) ಅವರು ಪುರಸ್ಕಾರ ಸ್ವೀಕರಿಸಿದರು.

ಸಹಕಾರ ಕ್ಷೇತ್ರದಲ್ಲಿ ಶ್ರಮದಾಯಕ, ಸಮರ್ಪಿತ ಸೇವಾ ನಿರ್ವಹಿಸಿ ಜನಸಾಮಾನ್ಯರ ಹಣಕಾಸು ಬೇಡಿಕೆಗಳಿಗೆ ಶೀಘ್ರಗತಿಯಲ್ಲಿ ಸ್ಪಂದಿಸಿ ಅತ್ಯಾಧುನಿಕ ತಂತ್ರಜ್ಞಾನಗಳ ಸೌಲಭ್ಯ ಬಳಕೆಯೊಂದಿಗೆ ಸರಳೀಕರಣವಾದ ಭಾರತ್ ಬ್ಯಾಂಕ್‌ನ ಸೇವೆ ಅನನ್ಯವಾದದ್ದು. ಗತ ಹಣಕಾಸು ಸಾಲಿನಲ್ಲಿ ಗುಣಮಟ್ಟದ ಹಣಕಾಸು ಸೇವೆಯನ್ನೊದಗಿಸಿ ಗ್ರಾಹಕರ ಅಪಾರ ಜನಮನ್ನಣೆಗೆ ಪಾತ್ರವಾಗಿರುವುದು ಶ್ಲಾಘನೀಯ. ಸಮೃದ್ಧಿತ ಅತ್ಯುತ್ತಮ ವಾರ್ಷಿಕ ವರದಿ ಸೇರಿದಂತೆ ಬ್ಯಾಂಕ್‌ನ ಸವಿಸ್ತಾರ ಮಾಹಿತಿ ಆಧಾರಿಸಿ ಈ ಪುರಸ್ಕಾರಕ್ಕೆ ಆಯ್ಕೆಗೊಳಿಸಲಾಗಿದೆ ಎಂದು ಪ್ರಸ್ತಾಪಿಸಿ ಜಿಲ್ಲಾ ಸಹಕಾರಿ ಬ್ಯಾಂಕ್ ಮುಖ್ಯಸ್ಥರು ಭಾರತ್ ಬ್ಯಾಂಕ್‌ಗೆ 'ಬಹುಶ್ರೇಷ್ಠ ಬ್ಯಾಂಕ್ ಪುರಸ್ಕಾರ' ಪ್ರದಾನಿಸಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್‌ನ ಉಪ ಕಾರ್ಯಾಧ್ಯಕ್ಷ ಪುರುಷೋತ್ತಮ್ ದಳ್ವಿ, ಪ್ರಧಾನ ಪ್ರಬಂಧಕ ಡಿ.ಎಸ್ ಕದಂ, ಸಂಚಾಲಕರುಗಳಾದ ಸಂದೀಪ್ ಎಸ್.ಘಂದಟ್, ಕ್ಯಾ| ಅಭಿಜಿತ್ ಎ.ಅಡ್ಸೂಲ್, ಜಯಶ್ರೀ ಎಸ್.ಪಂಚಾಲ್, ಪ್ರಸಾದ್ ಎಂ.ಲಡ್, ಶಿವಾಜಿರಾವ್ ನಲಾವಡೆ, ಕವಿತಾ ಪಿ.ದೇಶ್‌ಮುಖ್, ವಿಠಲ್ ಎನ್.ಭೋಸ್ಲೆ, ಅಭಿಷೇಕ್ ವಿ.ಘೊಸಾಳ್ಕರ್ ಶಿಲ್ಪಾ ಎ.ಸರ್ಪೋತ್‌ದರ್ ಭಾರತ್ ಬ್ಯಾಂಕ್‌ನ ನಿರ್ದೇಶಕರುಗಳಾದ ಚಂದ್ರಶೇಖರ ಎಸ್.ಪೂಜಾರಿ, ಜ್ಯೋತಿ ಕೆ.ಸುವರ್ಣ, ಯು.ಎಸ್ ಪೂಜಾರಿ, ನ್ಯಾ| ಎಸ್.ಬಿ ಅಮೀನ್, ದಾಮೋದರ ಸಿ.ಕುಂದರ್, ಕೆ.ಬಿ ಪೂಜಾರಿ, ಅಶೋಕ್ ಎಂ.ಕೋಟ್ಯಾನ್, ಗಂಗಾಧರ್ ಜೆ.ಪೂಜಾರಿ, ಭಾಸ್ಕರ್ ಎಂ.ಸಾಲ್ಯಾನ್, ಮುಖ್ಯ ಪ್ರಧಾನ ಪ್ರಬಂಧಕ ಅನಿಲ್‌ಕುಮಾರ್ ಆರ್.ಅಮೀನ್, ಮಹಾ ಪ್ರಂಬಧಕರುಗಳಾದ ಶೋಭಾ ದಯಾನಂದ್, ನಿತ್ಯಾನಂದ ಡಿ.ಕೋಟ್ಯಾನ್, ಉಪ ಮಹಾ ಪ್ರಂಬಧಕ ಹಾಗೂ ಬ್ಯಾಂಕ್‌ನ ಅಭಿವೃದ್ಧಿ ಮುಖ್ಯಸ್ಥ ಮೋಹನ್‌ದಾಸ್ ಹೆಜ್ಮಾಡಿ, ಶ್ರೀನಿವಾಸ ಆರ್.ಕರ್ಕೇರ ಮತ್ತಿತರರು ಉಪಸ್ಥಿತರಿದ್ದು ಪುರಸ್ಕಾರಕ್ಕಾಗಿ ಅಭಿಮಾನ ವ್ಯಕ್ತಪಡಿಸಿದರು.

ಚಿತ್ರ – ವರದಿ : ರೋನ್ಸ್ ಬಂಟ್ವಾಳ

# ಮೂಲ್ಕಿಯಲ್ಲಿ ಬಿಲ್ಲವರ ಅಂತರಾಷ್ಟ್ರೀಯ ಕ್ರಿಕೆಟ್ ಪಂದ್ಯಾಟ

ಚಿತ್ರ ; ವರದಿ : ರೋನ್ಸ್ ಬಂಟ್ವಾಳ್

ಮುಂಬಯಿ, ಫೆ.27: ವಿಶ್ವದಾದ್ಯಂತ ಸೇವಾನಿರತ ಬಿಲ್ಲವ ಸಮುದಾಯದ ವಿವಿಧ ಸಂಘ-ಸಂಸ್ಥೆಗಳ ಸಾಂಘಿಕತ್ವದ ಬಿಲ್ಲವ ಕ್ರೀಡಾ ಸಮಿತಿ ಆಯೋಜಿಸಿರುವ ಎರಡು ದಿನಗಳ ಬಿಲ್ಲವರ ಅಂತರಾಷ್ಟ್ರೀಯ ಕ್ರಿಕೆಟ್ ಪಂದ್ಯಾಟವು ಇಂದಿಲ್ಲಿ ಮೂಲ್ಕಿಯ ವಿಜಯಾ ಕಾಲೇಜು ಕ್ರೀಡಾಂಗಣದಲ್ಲಿ ಆರಂಭಿಸಲ್ಪಟ್ಟಿತು.

ಬಲೂನ್‌ಗುಚ್ಛಗಳನ್ನು ಬಾಣೆತ್ತರಕ್ಕೆ ಹಾರಿಸಿ ಪಂದ್ಯಾಟಕ್ಕೆ ವಿಧ್ಯುಕ್ತವಾಗಿ ಚಾಲನೆಯನ್ನೀಡಿದರು.

ಮುಖ್ಯ ಅತಿಥಿಯಾಗಿ ಜಿ.ಬಿ ಕನ್‌ಸ್ಟ್ರಕ್ಷನ್‌ನ ಗಣೇಶ್ ಎ.ಬಂಗೇರ, ಪ್ರಧಾನ ಅಭ್ಯಾಗತರುಗಳಾಗಿ ವಿಜಯಾ ಕಾಲೇಜು ಮುಖ್ಯಸ್ಥೆ ಶಮಿನಾ ಆಳ್ವ, ಶ್ರೀ ಗೋಕರ್ಣನಾಥ ಕ್ಷೇತ್ರ ಕುದ್ರೋಳಿ ಅಧ್ಯಕ್ಷ ಸಾಯಿ ರಾಮ್, ಶ್ರೀ ವಿಶ್ವನಾಥ ಕ್ಷೇತ್ರ ಕಟಪಾಡಿ ಇದರ ಅಧ್ಯಕ್ಷ ಅಶೋಕ್ ಎಂ.ಸುವರ್ಣ, ಗುಜರಾತ್ ಬಿಲ್ಲವ ಸಂಘದ ಸ್ಥಾಪಕಾಧ್ಯಕ್ಷ ಮೋಹನ್ ಸಿ. ಪೂಜಾರಿ, ಅಖಿಲ ಭಾರತ ಬಿಲ್ಲವರ ಯೂನಿಯನ್ ಅಧ್ಯಕ್ಷ ನವೀನ್‌ಚಂದ್ರ ಡಿ.ಸುವರ್ಣ, ಬಿಲ್ಲವ ಜಾಗೃತಿ ಬಳಗ ಮುಂಬಯಿ ಅಧ್ಯಕ್ಷ ಎನ್.ಟಿ ಪೂಜಾರಿ, ಬಿಲ್ಲವರ ಅಸೋಸಿಯೇಶನ್ ಮುಂಬಯಿ ಮಾಜಿ ಅಧ್ಯಕ್ಷ ಎಲ್.ವಿ ಅಮೀನ್ ಉಪಸ್ಥಿತರಿದ್ದರು.

ವಿಶ್ವದ ಎಲ್ಲಾ ಬಿಲ್ಲವರು ಒಂದೇ ರಕ್ತಸಂಬಂಧಿಗಳು ಆದುದರಿಂದ ಬಿಲ್ಲವರೆಲ್ಲರೂ ಒಳ್ಳೆಯ ಬಂಧುಗಳಾಗಿದ್ದಾರೆ. ಪ್ರಸಕ್ತ ಬಿಲ್ಲವರು ದುಡ್ಡು, ಧೈರ್ಯಶಾಲಿಗಳಾಗಿದ್ದಾರೆ. ಅಂತೆಯೇ ನಲ್ಲಿನ ಬಹುತೇಕ ಹೆಣ್ಣುಮಕ್ಕಳು ಸುಶಿಕ್ಷಿತರಾಗಿದ್ದಾರೆ ಆದುದರಿಂದಲೇ ಬಿಲ್ಲವರು ಎಲ್ಲವುದರಲ್ಲೂ ಶ್ರೀಮಂತರಾಗಿದ್ದಾರೆ. ಆದರೆ ಜನರಿಂದ ಜನರೊಳಗಿನ ವ್ಯತ್ಯಾಸ ಸಲ್ಲದು. ನಮ್ಮಲ್ಲಿನ ಋಣಾತ್ಮಕ ತಿಳುವಳಿಕೆಯಿಂದ ಸಂಬಂಧಗಳು ಕ್ಷೀಣಿಸಿರಬಹುದು. ಕೋಟಿಚೆನ್ನಯರ ರಕ್ತಗತ ಬಲಾಢ್ಯತೆಯನ್ನು ಪ್ರದರ್ಶಿಸುವ ಕಾಲ ಇದಲ್ಲ. ನಮ್ಮ ಯುವಜನತೆ ಪೆಟ್ಟು ಸಿಟ್ಟು ಬಿಟ್ಟು ಗಲಾಟೆ, ಗುದ್ದಾಟ, ಹರಾಟೆಗಳ ಭರಾಟೆಗೆ ಹೋಗದೆ ಸಮಾಜಹಿತಕ್ಕಾಗಿ ಶ್ರಮಿಸುವ ಅಗತ್ಯ ನಮಗಿದೆ ಎಂದು ರಮೇಶ್ ಕುಮಾರ್ ಕರೆಯಿತ್ತರು.





ರಾಷ್ಟ್ರೀಯ ಬಿಲ್ಲವರ ಮಹಾ ಮಂಡಲ ಮೂಲ್ಕಿ ಅಧ್ಯಕ್ಷ ಮತ್ತು ಬಿಲ್ಲವ ಕ್ರೀಡಾ ಸಮಿತಿ ಗೌರವಾಧ್ಯಕ್ಷ ಜಯ ಸಿ.ಸುವರ್ಣ ಅಧ್ಯಕ್ಷತೆಯಲ್ಲಿ ಜರುಗಿದ ಉದ್ಘಾಟನಾ ಸಮಾರಂಭದಲ್ಲಿ ದೀಪಾ ಕಂಫರ್ಟ್ಸ್‌ನ ಆಡಳಿತ ನಿರ್ದೇಶಕ ರಮೇಶ್ ಕುಮಾರ್ ದೀಪ ಪ್ರಜ್ವಲಿಸಿ ಹಾಗೂ ಭಾರತ್ ಬ್ಯಾಂಕ್‌ನ ನಿರ್ದೇಶಕ, ಮಾಜಿ ಕಾರ್ಯಾಧ್ಯಕ್ಷ ವಾಸುದೇವ ಆರ್.ಕೋಟ್ಯಾನ್ ಕ್ರೀಡಾ ಧ್ವಜಾರೋಹಣ ನಡೆಸಿ ಹಾಗೂ ಉದ್ಯಮಿ ಚಂದ್ರಶೇಖರ್ ಎಸ್.ಪೂಜಾರಿ ವಡಲಾ

11ನೇ ಪುಟಕ್ಕೆ

# ಕೃತಿಯ ಕುರಿತು

# ಆರದಿರಲಿ ಬೆಳಕು




ಕೃತಿ : ಆರದಿರಲಿ ಬೆಳಕು
ಕಥಾಸಂಕಲನ :
ಡಾ. ಕರುಣಾಕರ ಎನ್.ಶೆಟ್ಟಿ, ಪಣಿಯೂರು
ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತ್
ಪುಟ : XII +98
ಪ್ರಥಮ ಮುದ್ರಣ : 2015
ಬೆಲೆ : 150

ಮುಂಬಯಿಯ ಕನ್ನಡ ಕಥಾ ಸಾಹಿತ್ಯ ಲೋಕದ ಉದಯೋನ್ಮುಖ ಖ್ಯಾತ ನಾಮರಲ್ಲಿ ಡಾ. ಕರುಣಾಕರ್ ಎನ್. ಶೆಟ್ಟಿ ಪಣಿಯೂರು ಪ್ರಮುಖರು. ಅವರು ಈವರೆಗೆ ಬರೆದಿರುವ ಸುಮಾರು 15–16 ಮೌಲ್ಯಯುತವಾದ ಕನ್ನಡ ಕೃತಿಗಳಲ್ಲ. ಸುಮಾರು ನಾಲ್ಕು ಸಣ್ಣ ಕಥೆಗಳ ಸಂಚಯಗಳೇ ಬೆಳಕು ಕಂಡಿರುವುದು ಉಲ್ಲೇಖನೀಯ. ಪ್ರಸ್ತುತ ಪ್ರಕಟವಾಗಿರುವ "ಆರದಿರಲಿ ಬೆಳಕು" ಕರುಣಾಕರ ಶೆಟ್ಟಿ ಅವರ ಐದನೆಯ ಮಹತ್ವದ ಕಥಾ ಕೃತಿಯಾಗಿದೆ.

ಡಾ. ಕರುಣಾಕರ್ ಅವರು ತನ್ನ ಬರವಣಿಗೆಯನ್ನು ವಿದ್ಯಾರ್ಥಿ ದೆಸೆಯಿಂದಲೇ ಪ್ರೇಮ ಪ್ರಧಾನ ಸಣ್ಣ ಕಥೆಗಳಿಂದ ಅರಂಭಿಸಿದ್ದರು. ಅವರು ವಿವಾಹಪೂರ್ವದ ಮತ್ತು ನಂತರದ ಪ್ರಣಯ ಪ್ರಸಂಗಗಳನ್ನು ಬಹಳ ಸೊಗಸಾಗಿ ವಿಶಿಷ್ಟ ರೀತಿಯಿಂದ ನಿರೂಪಿಸಿರುವುದು ಅವರ ಕಥೆಗಳನ್ನು ಓದುವಾಗ ಸ್ಪಷ್ಟವಾಗಿ ಗೋಚರವಾಗುತ್ತದೆ. ಅವರ ಪ್ರೇಮ ಕಥೆಗಳಲ್ಲಿ ಅಶ್ಲೀಲತೆಯಿಲ್ಲ. ಗಂಡು ಹೆಣ್ಣಿನ ಆಕರ್ಷಣೆ ಕುರಿತಂತೆ ಅವರು ತನ್ನದೇ ಆದ ವಿನೂತನ ಶೈಲಿಯಿಂದ ಎಷ್ಟೊಂದು ಮುಕ್ತವಾಗಿ, ಆಪ್ತವಾಗಿ, ನಿಷ್ಕಲ್ಮಶವಾಗಿ, ನಿಷ್ಕಾಮ ಭಾವನೆಯಿಂದ ಪ್ರೇಮ ಸಾಹಿತ್ಯದ ಕೃಷಿಯನ್ನು ಹುಲುಸಾಗಿ ಬೆಳೆಸಬಹುದೆಂಬುದನ್ನು ಅವರ ಪ್ರಸ್ತುತ ಕಥಾ ಗುಚ್ಛ "ಆರದಿರಲಿ ಬೆಳಕು" ತೋರಿಸಿಕೊಡುತ್ತದೆ.

ಕನ್ನಡ ಸಾಹಿತ್ಯ ಷರಿಷತ್ತು ಮಹಾರಾಷ್ಟ್ರ ಘಟಕ, ತನ್ನ ಶತಮಾನ ಸಂಭ್ರಮದ ವಿಂಶತೆ ಮಾಲಿಕೆಯಲ್ಲಿ ಪ್ರಕಟಿಸಿರುವ "ಆರದಿರಲಿ ಬೆಳಕು" ಸಂಕಲನದಲ್ಲಿ ಸುಮಾರು 18 ಸಣ್ಣ ಕಥೆಗಳಿವೆ. ಇಲ್ಲಿ ಅಚ್ಚು ಕಟ್ಟಾಗಿ ಮೂಡಿ ಬಂದಿರುವ ಪ್ರತಿಯೊಂದು ಕಥೆಯೂ ಓದುಗರ ಮೈ-ಮನವನ್ನು ಸೂರೆಗೊಳ್ಳುತ್ತದೆ.

ಲೇಖಕ ಡಾ. ಕರುಣಾಕರ್ ಶೆಟ್ಟಿ ಅವರು ಭಾವಜೀವಿಗಳು ಅವರು ನೆಲದ ಗುಂಗು, ಮಣ್ಣಿನ ಹಂಗು ಮತ್ತು ಸಮಾಜದ ಕಾಳಜಿಯುಳ್ಳ ಸಭ್ಯ, ಸಜ್ಜನರಾದ್ದರಿಂದ, ತಾನು ಸಮಾಜದಲ್ಲಿ ನೋಡಿದ್ದನ್ನು ಮುಕ್ತವಾಗಿ ಹೃದ್ಯವಾಗಿ, ಮನೋಜ್ಞವಾಗಿ ಬರೆಯಬಲ್ಲವರಾಗಿದ್ದಾರೆ. ಕಥನಕಲೆ ಅವರಿಗೆ ದೈವದತ್ತವಾಗಿ ಕರಗತವಾಗಿದೆ. ಅವರ ಪ್ರಸ್ತುತ ಸಂಕಲನದ ಕಥೆಗಳನ್ನು ಓದುವಾಗ "ಮಾಸ್ತಿ" ಅವರ ಕಥೆಗಳು ನೆನಪಾಗುತ್ತದೆ.

ಡಾ. ಕರುಣಾಕರ್ ಅವರು ಪ್ರೇಮ ಪ್ರಸಂಗಗಳ ವಿಶ್ಲೇಷಣೆಯಲ್ಲಿ ಪಳಗಿದವರಾಗಿದ್ದಾರೆ. ಅವರು ಪ್ರಣಯಗಳ ಕಥನಗಳಲ್ಲಿ ಜೀವನ ದರ್ಶನ ಪ್ರತಿಪಾದಿಸುವ ಶೈಲಿ ಮೂಲತಃ ಗ್ರಾಮೀಣ ಜಾನಪದ ಲೋಕದ್ದಾಗಿರುತ್ತದೆ. ಲೇಖಕರು ತಮ್ಮ ಮನದಾಳದ ಮಾತಿನಲ್ಲಿ ಹೇಳಿಕೊಂಡಿರುವಂತೆ ಇಲ್ಲಿ ಅಕ್ಷರ ರೂಪದಲ್ಲಿ ಮೂಡಿರುವ ಕಥೆಗಳು ನಾನೀಗ ನೆಲೆ ನಿಂತಿರುವ ಮಹಾರಾಷ್ಟ್ರದ ಮಣ್ಣಿನಲ್ಲಿ ಬೆಳಕು ಕಂಡಿವೆಯಾದರೂ ಇವುಗಳ ಮೂಲ ಸೆಲೆಯಿರುವುದು ದಕ್ಷಿಣ ಕನ್ನಡ, ತುಳುನಾಡಿನ ನಾಗನಡೆಯ ಪುಣ್ಯಮಣ್ಣಿನಲ್ಲಿ ನನಗೆ ಜನ್ಮ ನೀಡಿದ ತುಳುನಾಡಿನಲ್ಲಿ ಎಂದು ತೋಡಿಕೊಂಡಿರುವುದು ಅವರ ಜೀವನ ಶ್ರದ್ಧೆಯನ್ನು ಎತ್ತಿ ತೋರಿಸುತ್ತದೆ.

"ಆರದಿರಲಿ ಬೆಳಕು" ಸಂಕಲನದ ಮೂರನೆಯ ಕಥೆಯಾಗಿ ಮೂಡಿ ಬಂದಿರುವ "ನಿನ್ನ ನೆನಪಿನಲ್ಲಿ" ಕಥೆ, ಓದುಗರ ನೆನಪಿನಲ್ಲೂ ಸದಾ ಉಳಿಯಬಹುದಾದ ಒಂದು ಹೃದಯ.... ನಿರೂಪಣೆಯಾಗಿದೆ. ಈ ಕಥೆಯ ನಾಯಕ ಗೌರವ, ನಾಯಕಿ ಅನನ್ಯ .... ಅಧಿಕಾರಿಗಳು. ಪರಸ್ಪರ ಪ್ರೇಮಿಸಿ ಮದುವೆಯಾಗುತ್ತಾರೆ. ಅವರಿಬ್ಬರಲ್ಲಿ ಅವಾಸ್ತವಿಕ ಕನಸುಗಳಿರು... ಆಸರೆ ವಿಧಿ ಲಿಖಿತವನ್ನು ತಪ್ಪಿಸಲಾಗುವುದಿಲ್ಲ ಅನನ್ಯ ಗರ್ಭಿಣಿಯಾಗುತ್ತಾಳೆ. ದುರಾದೃಷ್ಟದಿಂದ 5–6 ತಿಂಗಳಲ್ಲಿ ಗರ್ಭಪಾತವಾಗುತ್ತದೆ. ಇಬ್ಬರೂ ಬಹಳ ನೋವು ಅನುಭವಿಸುತ್ತಾರೆ. ಅನನ್ಯ ಮತ್ತೆ ಗರ್ಭಿಣಿಯೆಂದು ತಿಳಿದಾಗ ನಲಿವು-ಸಂತಸ! ಅನನ್ಯಳ ಆರೋಗ್ಯವನ್ನು ನೋಡಿಕೊಳ್ಳುವುದಕ್ಕೆ ಗೌರವ್ ತನ್ನ ತಾಯಿಯನ್ನು ಊರಿನಿಂದ ಕರೆಸುತ್ತಾನೆ. ಅದೊಂದು ದಿನ ಅನನ್ಯ ತನ್ನ ಆಫೀಸಿನಲ್ಲೇ ಎದೆನೋವೆಂದು ಚಡಪಡಿಸತೊಡಗಿದಾಗ ಅವಳನ್ನು ದೊಡ್ಡ ಹಾಸ್ಪಿಟಲಿನಲ್ಲಿ ಸೇರಿಸಿದ್ದ ಡಾಕ್ಟರ್ ಚೆಕ್‌ಅಪ್ ಮಾಡಿದ ನಂತರ ಅನನ್ಯಳಿಗೆ ಸ್ತನದ ಕ್ಯಾನ್ಸರ್ ಎಂದು ಗೊತ್ತಾಗುತ್ತದೆ.

ಗರ್ಭಪಾತ ಮಾಡಿಸಿದರೆ ಆಕೆಯ ಚಿಕಿತ್ಸೆ ಮಾಡಬಹುದೆಂದೂ, ಇದು ಆರಂಭಿಕ ಹಂತ ಆಗಿರುವುದರಿಂದ ಅನನ್ಯ ಗುಣ ಮುಖವಾಗಲೂ ಸಾಧ್ಯತೆಯಿದೆಯೆಂದೂ ಆಕೆಗೆ 'ಬ್ರೆಸ್ಟ್ ಕ್ಯಾನ್ಸರ್' ಆಗಿರುವ ಕಾರಣ, ಆಕೆಯ ಒಂದು ಮೊಲೆಯನ್ನು ತೆಗಿಸಿದರೆ ಆಕೆ ಬದುಕಿ ಉಳಿಯಬಲ್ಲಲೆಂದು ಡಾಕ್ಟರ್ ಹೇಳಿದರೂ ಅನನ್ಯ ಗರ್ಭಪಾತ ಮಾಡಿಸಲಿಕ್ಕೆ ಒಪ್ಪಿಗೆ ನೀಡುವುದಿಲ್ಲ. ನಾನು ನನ್ನ ಮಗುವಿಗೆ ಜನ್ಮ ನೀಡಿದ ನಂತರವೇ ಚಿಕಿತ್ಸೆ ಮಾಡಿಸಿಕೊಳ್ಳುತ್ತೇನೆ. ಗರ್ಭ ತೆಗೆಸಿದರೂ ತಾನು ಉಳಿದೇ ಉಳಿಯುತ್ತೇನೆ ಎಂಬ ಭರವಸೆ ಇಲ್ಲ. ಹಾಗಿದ್ದರೆ ನನ್ನ ಗರ್ಭಸ್ಥ ಕುಡಿಯನ್ನು ನಾನೇಕೆ ಕೊಲ್ಲಿಸಬೇಕು? ಎಂದು ಹಠ ಸಾಧಿಸುತ್ತಾಳೆ. ಗಂಡ ಗೌರವನನ್ನು ಹತ್ತಿರಕ್ಕೆ ಕರೆದು, "ನನ್ನ ನೆನಪಿಗೆ ನನ್ನ ಮಗುವಾದರೂ ನಿಮ್ಮ ಜತೆ ನೂರು ಕಾಲ ಬದುಕಿ ಬಾಳಲಿ", ನನ್ನನ್ನು ನಿರಂತರ ಆ ಮಗುವಿನಲ್ಲಿ ಕಾಣಲು ಯತ್ನಿಸಿ" ಎಂದು ಗಂಡನಲ್ಲಿ ತಿಳಿಸಿ ತ್ಯಾಗಮಯಿಯಾಗಿ ಪ್ರಾಣ ಬಿಡುತ್ತಾಳೆ.

"ಆರದಿರಲಿ ಬೆಳಕು" ಒಂದು ಉತ್ತಮ ಸಂಕಲನ. ಡಾ. ಪ್ರದೀಪ ಕುಮಾರ್ ಹೆಬ್ರಿ ಅವರು ಕೃತಿಗೆ ಸಮಯೋಚಿತವಾದ ಮುನ್ನುಡಿ ಬರೆದಿದ್ದಾರೆ.





ಕೇವಲ ಐದಾರು ಸಾವಿರ ಬೆಲೆಯ ಮೊಬೈಲ್
ಸ್ಕ್ರೀನ್‌ಗಾರ್ಡ್ ಹಾಕಿಸ್ತೀವಿ.
ಈಗ ಅದೂ ಸಾಲ್ದು ಅಂತ ಟೆಂಪರ್ ಗ್ಲಾಸ್
3ಎಮ್‌ಎಮ್‌ದು ಹಾಕಿಸ್ತಾರೆ.
ಮೊಬೈಲ್‌ಗೆ ಕವರ್ ಬೇರೆ
ಐದಾರು ಸಾವಿರ ಮೊಬೈಲ್‌ಗೆ ಇಷ್ಟೆಲ್ಲಾ ಮಾಡೋರು
ಎಷ್ಟು ಬೆಲೆ ಕೊಟ್ಟರೂ ಸಿಗದಿರೋ ತಲೆಗೆ ಹೆಲ್ಮೆಟ್
ಹಾಕ್ರಪ್ಪ ಅಂದ್ರೆ ಸರ್ಕಾರಕ್ಕೆ ಶಾಪ ಹಾಕ್ತಾರೆ!

# ಕನ್ನಡವನ್ನು ಸರ್ವಾಂಗಗಳಲ್ಲಿ ಅನುಷ್ಠಾನಕ್ಕೆ ತರುವುದು ನಮ್ಮ ಉದ್ದೇಶ

**– ಡಾ.ಎಲ್. ಹನುಮಂತಯ್ಯ**

ಮಂಗಳೂರು : ಮಾರ್ಚ್ 9, ನಗರದ ಉರ್ವಸ್ಟೋರ್ ಮೈದಾನದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ, ದ.ಕ. ಜಿಲ್ಲಾಡಳಿತದ ಸಹಕಾರದೊಂದಿಗೆ ಕನ್ನಡ ನುಡಿ ಹಬ್ಬವನ್ನು ಆಯೋಜಿಸಲಾಗಿತ್ತು.



ಸಮಾರಂಭವನ್ನು ದ.ಕ. ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಶ್ರೀ ಪ್ರದೀಪ್ ಕುಮಾರ್ ಕಲ್ಕೂರ ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ನಮ್ಮ ಜಿಲ್ಲೆ ಬಹು ಭಾಷೆಗಳ ನಾಡು ಇಲ್ಲಿ ಕೊಂಕಣಿ, ತುಳು ಮತ್ತು ಬ್ಯಾರಿ ಭಾಷೆ, ಹಲವರ ಮನೆ ಮಾತು. ಆದರೂ ನಾವು ಕನ್ನಡಕ್ಕೆ ವಿಶೇಷ ಗೌರವ ನೀಡುತ್ತೇವೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಎಲ್. ಹನುಮಂತಯ್ಯ "ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ಕನ್ನಡಿಗ ಸರ್ವ ತಂತ್ರ ಸ್ವತಂತ್ರ ಪ್ರಜೆ ನಾಡಿನ ಸರ್ಕಾರ ಕನ್ನಡವನ್ನು ಸರ್ವಾಂಗಗಳಲ್ಲಿ ಅನುಷ್ಠಾನಕ್ಕೆ ತರಲು ಸರ್ವ ಪ್ರಯತ್ನ ಮಾಡಿದೆ. ಈ ನಿಟ್ಟಿನಲ್ಲಿ ಆಗಿರುವ ಕೆಲಸಕ್ಕಿಂತ ಆಗಬೇಕಾಗಿರುವ ಕೆಲಸಗಳು ಸಾಕಷ್ಟಿವೆ.

ಶಾಸ್ತ್ರೀಯ ಭಾಷೆಯ ಸ್ಥಾನಮಾನಗಳನ್ನು ಪಡೆದಿರುವ ಕನ್ನಡವನ್ನು ಬೆಳೆಸುವ ಕೈಂಕರ್ಯಕ್ಕೆ ಎಲ್ಲಾ ಕನ್ನಡಿಗರು ಮನಸ್ಸು ಮಾಡಬೇಕು. ಅದು ಇಂದಿನ ಅಗತ್ಯ. ಕನ್ನಡಿಗರಲ್ಲಿ ಯಥೇಚ್ಚವಾಗಿ ತಂತ್ರಜ್ಞರು ಲಭ್ಯವಿರುವಾಗ ಅವರನ್ನು ಬಳಸಿಕೊಂಡು ತಾಂತ್ರಿಕ ಕೌಶಲ್ಯವನ್ನು ಹೆಚ್ಚಿಸುವಲ್ಲಿ ಕನ್ನಡವನ್ನು ಮುಂಚೂಣಿಯ ಭಾಷೆಯಾಗಿ ಮಾಡಬೇಕು" ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯ ಅತಿಥಿ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ ಮತ್ತು ಹೃದಯವಾಹಿನಿ – ಕರ್ನಾಟಕದ ಸ್ಥಾಪಕ ಅಧ್ಯಕ್ಷ ಇಂ.ಕೆ.ಪಿ. ಮಂಜುನಾಥ್ ಸಾಗರ್ ಮಾತನಾಡಿ "ವಿಶ್ವದಾದ್ಯಂತ 70ಕ್ಕೂ ಹೆಚ್ಚು ಕನ್ನಡ ಸಂಘಗಳಿವೆ ಅವುಗಳಲ್ಲಿ 45 ಕನ್ನಡ ಸಂಘಗಳ ಅಧ್ಯಕ್ಷರು ಕರಾವಳಿಯ ಕನ್ನಡಿಗರು ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ 40 ಕನ್ನಡ ಸಂಘಗಳಿವೆ. ಅವುಗಳಲ್ಲಿ 35 ಕನ್ನಡ ಸಂಘಗಳ ಅಧ್ಯಕ್ಷರು ಕರಾವಳಿಯ ಕನ್ನಡಿಗರು ಇದು ಕರಾವಳಿಯ ಕನ್ನಡಿಗರಿಗೆ ಕನ್ನಡ ಭಾಷೆಯ ಮೇಲಿನ ಅಭಿಮಾನ ಮತ್ತು ಗೌರವವನ್ನು ತೋರಿಸುತ್ತದೆ" ಎಂದರು.

ಮುಖ್ಯ ಅತಿಥಿಗಳಾದ ಶ್ರೀ ಪ್ರಾಂಕ್ಲಿನ್ ಮಥಾಯಸ್ ಉರ್ವಸ್ಟೋರ್ ಕನ್ನಡ ಕಟ್ಟೆ ಮಂಗಳೂರು ಅಧ್ಯಕ್ಷ ಶ್ರೀ ಅಣ್ಣಾಯ ಕುಲಾಲ್ ಮತ್ತು ಸಾಹಿತಿ ಶ್ರೀ ಚಂದ್ರಶೇಖರ ಬೋಳೂರು ಉಪಸ್ಥಿತರಿದ್ದರು. ಡೊಳ್ಳುಕುಣಿತ, ಕಂಸಾಳೆ, ನೃತ್ಯ ಮತ್ತು ವೈವಿಧ್ಯಮಯ ಸಂಸ್ಕೃತಿ ಕಾರ್ಯಕ್ರಮಗಳು ಮನೋರಂಜನೆ ನೀಡಿದವು.

ಅತಿಥಿಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ॥ ಕೆ. ಮುರಳೀಧರ ಸ್ವಾಗತಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಶ್ರೀ ಚಂದ್ರಹಾಸ ರೈ, ಧನ್ಯವಾದ ಸಮರ್ಪಿಸಿದರು. ಜನಪದ ಗಾಯಕ ಗೋ.ನಾ. ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.





## ಬೆಳೆಸುವ ಬನ್ನಿ ಐಕ್ಯದ ಬೆಳೆಯನ್ನು



ಬಿಲ್ಲವರೆಲ್ಲ ಭೇದವ ಬಿಟ್ಟು
ಬನ್ನಿರಿ ನಾವು ಸಮಾನ ।
ಸಾರುವ ಇಂದು ನಾವೆಲ್ಲರು
ಒಂದು ಎನ್ನುವ ಗುರುಜ್ಞಾನ ।
ಮಡಿದರು ಕೋಟಿ
ಚೆನ್ನಯರಂದು ಕಾಣುತ
ಐಕ್ಯದ ಕನಸು ।
ಪಣ ತೊಡಿರೆಲ್ಲಾ ಮಾಡುವೆವೆಂದು ಅವರ ಕನಸು ನನಸು ॥
ಮೇಲು ಕೀಳು ಬಡವ ಬಲ್ಲಿದರ ಭೇದವ ಇಡಬೇಡಿ ।
ಬಿದ್ದವರನು ಮೇಲೆತ್ತುವ ಬನ್ನಿ ಎಲ್ಲರೂ ಒಟ್ಟಾಗಿ ॥
ವಿಶ್ವ ಬಿಲ್ಲವರ ಸಂಘಟನೆ ನಮಗಾಗಿಯೇ ಇಂದು ।
ಮನ ಮಾಡಿರೆಲ್ಲ ಬಿಡುತ ಮತ್ಸರ ದುಡಿಯುವ ಕೂಡಿ ಇಂದು ।
ನಾವೆಲ್ಲರೂ ಇಂದು ಬೆಳೆಸುವ ಐಕ್ಯದ ಬೆಳೆಯನ್ನು ।
ಪ್ರೀತಿಯ ಹೊಳೆಯೇ ಹರಿಯಲಿ ಕೊಚ್ಚುತ ಕೊಳೆಯನ್ನು ॥

ಒಂದೇ ತಾಯಿಯ ನೆತ್ತರು
ಇರುವುವವರು
ಬಿಲ್ಲವ ಜನರೆಂದು ।
ಸ್ನೇಹ ಪ್ರೇಮದ ಸಹೋದರ
ಭಾವನೆ
ಇರಲಿ ಎಂದೆಂದೂ ॥



– ದಯಾನಂದ ಬೋಂಟ್ರಾ
ಬರೋಡ

# ಟೈಮ್ಸ್ ರಿಟೈಲ್ ಐಕಾನ್ಸ್ ಗೌರವಕ್ಕೆ ಪಾತ್ರರಾದ ಡಾ। ಶಿವರಾಮ ಭಂಡಾರಿ




ಮುಂಬಯಿ, ಮಾ.14: ನಗರದ ಅಭಿವೃದ್ಧಿ ದೃಷ್ಟಿಕೋನದಲ್ಲಿ ಸಂಬಂಧಪಟ್ಟ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆಗೈದ ಸಾಧಕರನ್ನು ಗುರುತಿಸಿ ಗೌರವಿಸುವ ಉದ್ದೇಶವನ್ನಿರಿಸಿ ಟೈಮ್ಸ್ ಸಮೂಹದ ಓಪ್ಟಿಮಲ್ ಮೀಡಿಯಾ ಸೊಲ್ಯುಷನ್ ಇತ್ತೀಚೆಗೆ ಮುಂಬಯಿ ಅಲ್ಲಿನ ಬಿಕೆಸಿಯ ಸಾಫಿಟೆಲ್‌ನಲ್ಲಿ ಸಂಘಟಿಸಿದ್ದ ಟೈಮ್ಸ್ ರಿಟೈಲ್ ಐಕಾನ್ಸ್ ಕಾರ್ಯಕ್ರಮ ಆಯೋಜಿಸಿತ್ತು. ಸಮಾರಂಭದಲ್ಲಿ ಮುಂಬಯಿಯಲ್ಲಿ ಹೇರ್ ಸ್ಟೈಲೋ ಮೂಲಕ ಪ್ರಸಿದ್ಧಿ ಗಿಟ್ಟಿಸಿ ಕೊಂಡಿರುವ ನಾಡಿನ ಹೆಸರಾಂತ ಕೇಶ ವಿನ್ಯಾಸ ಸಂಸ್ಥೆ ಶಿವಾ'ಸ್ ಹೇರ್ ಡಿಝೈನರ್ಸ್ ಪ್ರೈವೇಟ್ ಲಿಮಿಟೆಡ್‌ನ ಆಡಳಿತ ನಿರ್ದೇಶಕ ಡಾ। ಶಿವರಾಮ ಕೆ.ಭಂಡಾರಿ ಅತ್ತೂರು ಅವರಿಗೆ ದಿ ಟೈಮ್ಸ್ ರಿಟೈಲ್ ಐಕಾನ್ಸ್ ಪ್ರದಾನಿಸಿ ಗೌರವಿಸಲಾಯಿತು.

ಮುಂಬಯಿಯನ್ನು ದೇಶದಲ್ಲಿಯೇ ಅತ್ಯಂತ ದೊಡ್ಡ ಮಾರುಕಟ್ಟೆಗಳ ಪಟ್ಟಿಗೆ ಸೇರಿಸಿದ ಗೌರವಕ್ಕಾಗಿ ಗುರುತಿಸಿ ವಂದನೆ ಸಲ್ಲಿಸಲ್ಪಟ್ಟ ಭವ್ಯ ಸಮಾರಂಭದಲ್ಲಿ ಮಹಾನಗರದ ಗಣ್ಯಾಧಿಗಣ್ಯರು ಪಾಲ್ಗೊಂಡು ಹೆಚ್ಚು ಆಕರ್ಷಕ ಮತ್ತು ಗ್ಲಾಮರ್‌ಮಯವಾಗಿದ್ದು, ದೆಹಲಿಯ 13 ಸಂಶೋಧನಾ ಏಜೆನ್ಸಿಗಳ ಸಂಶೋಧನೆಯ ಅಡಿಯಲ್ಲಿ ಆಯ್ಕೆ ಮಾಡಲಾಗಿದ್ದ ವಿಜೇತರನ್ನು ಸಮಾರಂಭದಲ್ಲಿ ಗೌರವಿಸಿ ಅಭಿನಂದಿಸಲಾಗಿದ್ದು, ಆ ಪಯ್ಕಿ ಶಿವಾಸ್ ಸಲೂನ್ ಎಂಡ್ ಅಕಾಡೆಮಿ ಕಾರ್ಯಾಧ್ಯಕ್ಷೆ ಸೋನಾಲಿ ಕುಲಕರ್ಣಿ ಮತ್ತು ಡಾ। ಶಿವರಾಮ ಕೆ.ಭಂಡಾರಿ ಅವರಿಗೆ ಗೌರವ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಈ ಅಭೂತಪೂರ್ವ ಸಾಧಕರನ್ನು ದಿ ಟೈವರ್ಸ್ ರಿಟೈಲ್ ಐಕಾನ್ಸ್ ಸಮಾರಂಭದಲ್ಲಿ ಕಾರ್ಯಕ್ರಮವನ್ನು ಸಚಿನ್ ಕುಂಭಾರ್ ನಿರೂಪಿಸಿದರು. ದೆಹಲಿ ಮೂಲದ ಪುರುಷ ವಸ್ತ್ರ ವಿನ್ಯಾಸಗಾರ ಸರಬ್ ಖಾನಿಜಾವು ಅವರಿಂದ ವಿನ್ಯಾಸಗೊಂಡ ಉಡುಪು ಕುಂಭಾರ್ ಧರಿಸಿ ಸಮಾರಂಭದ ಅತ್ಯಾಕರ್ಷಣೆಗೆ ಪಾತ್ರರಾದರು.

ಕಾರ್ಯಕ್ರಮದಲ್ಲಿ ಪ್ರಸಿದ್ದ ಸೂಫಿ ವೈರ್ಲಿಂಗ್ ರಿಝುಯಾ ನಾಥ್‌ರ ಪ್ರದರ್ಶನವಿತ್ತು. ಸೂಫಿ ವೈರ್ಲಿಂಗ್ ಮತ್ತು ಒಡಿಸ್ಸಿ ವಾಚನದಲ್ಲಿ ನಿಸ್ಸೀಮರಾಗಿದ್ದು, ಪ್ರದರ್ಶನ ನೆರೆದವರ ಮನರಂಜಿಸಿತ್ತು. ನಂತರ ಏಷ್ಯಾದ ಅತ್ಯಂತ ವೇಗದ ಪೈಂಟರ್ ವಿಲಾಸ್ ನಾಯಕ್ ಅವರ ಚಿತ್ರಕಲಾ ಕೌಶಲ್ಯದ ಪ್ರದರ್ಶನ ನಡೆದಿತ್ತು. ಕೆಲವೇ ಕ್ಷಣಗಳಲ್ಲಿ ಸುಂದರವಾದ ಹತ್ತಾರು ಚಿತ್ರಗಳನ್ನು ಬಿಡಿಸಿ ಸಮಾರಂಭದಲ್ಲಿ ನೆರೆದಿದ್ದ ಗಣ್ಯರನ್ನು ದಿಗ್ಮೂಢರನ್ನಾಗಿಸಿದರು.

ಶಿವಾ'ಸ್ ಸಂಸ್ಥೆಯು ಪ್ರಸಕ್ತ ಮುಂಬಯಿಯಲ್ಲಿ 10 ಸಲೂನ್ಸ್ ಮತ್ತು ಅಕಾಡೆಮಿಯನ್ನು ನಡೆಸುತ್ತಿದ್ದಾರೆ. ಕಳೆದ 25 ವರ್ಷಗಳಿಂದ ಈ ಸಮೂಹವು ಟೆಕ್ನಿಷಿಯನ್ಸ್, ಹೇರ್ ವಿನ್ಯಾಸಗಾರರು ಮತ್ತು ಬ್ಯೂಟಿ ಥೆರಪಿಸ್ಟಿಗಳ ಪ್ರಬಲ ತಂಡವನ್ನೇ ರಚಿಸಿ ಜಗತ್ತಿಗೆ ಚಿರಪರಿತವಾಗಿದೆ.




# ಕರ್ನಾಟಕ ಮಾಧ್ಯಮ ಅಕಾಡೆಮಿ

# ಪ್ರಶಸ್ತಿ ಪುರಸ್ಕೃತರು – 2015

## ಸಾಮಾಜಿಕ ಬದ್ಧತೆಯ ಸಂಭಾವಿತ ಪತ್ರಕರ್ತ



ಶ್ರೀ ಬಿ.ಎಸ್. ಸತ್ಯನಾರಾಯಣ (ಬಿ.ಎಸ್.ಸತ್ಯ)

ಗುಜರಾತ್‌ನಲ್ಲಿ 2001 ರಲ್ಲಿ ಸಂಭವಿಸಿದ ಭೀಕರ ಭೂಕಂಪದ ವೇಳೆ ಅಲ್ಲಿಗೆ ತೆರಳಿ ಉದಯ ವಾರ್ತಾ ವಾಹಿನಿಯಲ್ಲಿ ವರದಿ ನೀಡಿದ ಕನ್ನಡ ಪತ್ರಿಕೋದ್ಯಮದ ಮೊದಲ ವರದಿಗಾರ ಎಂಬ ಹೆಗ್ಗಳಿಕೆ ಬಿ.ಎಸ್.ಸತ್ಯನಾರಾಯಣರದ್ದು. ಸದ್ಯ ಬೆಂಗಳೂರಿನಲ್ಲಿ ಉದಯ ವಾರ್ತಾ ವಾಹಿನಿಯ ಸುದ್ದಿ ಮುಖ್ಯಸ್ಥರು. 25 ವರ್ಷಗಳಿಂದಲೂ ಪತ್ರಕರ್ತರಾಗಿ ಕಾರ್ಯನಿರತರು.

1991ರಲ್ಲಿ ಅಭಿಮಾನಿ ಸಂಸ್ಥೆಯ 'ಈ ಸಂಜೆ' ಪತ್ರಿಕೆಯಲ್ಲಿ ಕೆಲಸಕ್ಕೆ ಸೇರ್ಪಡೆ. 80ರ ದಶಕದಲ್ಲಿ ವಿದ್ಯಾರ್ಥಿ ದೆಸೆಯಿಂದಲೇ ರೈತ– ದಲಿತಪರ ಹಾಗೂ ಗೋಕಾಕ್ ಚಳವಳಿಯಲ್ಲಿ ಭಾಗಿ. ಸಮಾಜಸೇವೆಯ ತುಡಿತ. ಹೀಗಾಗಿ ಪತ್ರಿಕಾರಂಗವನ್ನು ಪ್ರವೇಶಿಸಿ ಮಾಧ್ಯಮವನ್ನೇ ಸಮಾಜ ಸೇವೆಯ ಅಸ್ತ್ರವನ್ನಾಗಿಸಿಕೊಂಡರಿವರು.


ಉದಯ ನ್ಯೂಸ್‌ನಲ್ಲಿ ರಾಜಕೀಯ ವಿಶ್ಲೇಷಣೆ, ಚರ್ಚೆ, ಸಂವಾದ ಹಾಗೂ ನೇರ ಪ್ರಸಾರ ಕಾರ್ಯಕ್ರಮಗಳ ನಿರೂಪಣೆ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮ ಹಾಗೂ ಸಾಮಾಜಿಕ ವಿಚಾರಗಳ ಕುರಿತು ಉಪನ್ಯಾಸ ನೀಡಿದ್ದಾರೆ.

ಬೆಂಗಳೂರು ಪ್ರೆಸ್ ಕ್ಲಬ್‌ನ ಪ್ರಧಾನ ಕಾರ್ಯದರ್ಶಿ, ವರದಿಗಾರರ ಕೂಟದ ಕಾರ್ಯದರ್ಶಿ, ಪತ್ರಕರ್ತರ ಸಹಕಾರ ಸಂಘದ ನಿರ್ದೇಶಕ. ಸದ್ಯ ಬೆಂಗಳೂರು ಟಿವಿ ಜರ್ನಲಿಸ್ಟ್ ಅಸೋಸಿಯೇಶನ್‌ನ ಅಧ್ಯಕ್ಷರಾಗಿ ಸೇವಾ ನಿರತರು. ಚಾರಣ, ವನ್ಯಜೀವಿ ಸಂರಕ್ಷಣೆ– ಕೃಷಿ ಕ್ಷೇತ್ರದತ್ತ ವಿಶೇಷ ಆಸಕ್ತಿಯುಳ್ಳ ಇವರಿಗೆ ಈ ಭಾರಿಯ ಕರ್ನಾಟಕ ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ದೊರಕಿದೆ.

## ಕೋಲಾರದ ಕಣ್ಮಣಿ

ಹಾಸನದ 'ಜನಮಿತ್ರ' ಪತ್ರಿಕೆಯ ಉಪ ಸಂಪಾದಕರಾಗುವ ಮೂಲಕ ಪತ್ರಿಕಾರಂಗಕ್ಕೆ ಬಂದವರು. ಇದೇ ಪತ್ರಿಕೆಯ ಸ್ಥಾನಿಕ ಸಂಪಾದಕರಾಗಿ ಚಿಕ್ಕಮಂಗಳೂರಿನಲ್ಲಿ ಸೇವೆ. ದಾವಣಗೆರೆಯ 'ನಗರವಾಣಿ' ದೈನಿಕದ ಸ್ಥಾನಿಕ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಪ್ರಸಕ್ತ 'ಕೋಲಾರ' ಪತ್ರಿಕೆಯ ಸಂಪಾದಕರಾಗಿರುವ ಕೆ. ಪ್ರಹ್ಲಾದರಾವ್ ತಮ್ಮ ಪತ್ರಿಕೆಯಿಂದ ಜಿಲ್ಲೆಯ ಅನೇಕ ಸಮಸ್ಯೆಗಳಿಂದ ಸರ್ಕಾರದ ಕಣ್ಣು ತೆರೆಸಿದ ದಿಟ್ಟ ಪತ್ರಕರ್ತ. ಪತ್ರಿಕೆ



ಶ್ರೀ ಪ್ರಹ್ಲಾದರಾವ್ ಕೆ.

ಇಂದಿಗೂ ಜನಮನದಲ್ಲಿ ಹಾಸು ಹೊಕ್ಕಾಗಿದೆ.

ಬೆಂಗಳೂರು ವಿವಿಯ ಸಂವಹನ ವಿಭಾಗ, ಭಾರತೀಯ ವಿದ್ಯಾ ಭವನ, ಹಂಪಿಯ ಕನ್ನಡ ವಿವಿ, ಕುಪ್ಪಂನ ದ್ರಾವಿಡ ವಿವಿ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿದ್ಯಾರ್ಥಿಗಳ ಮಾಹಿತಿ– ಸಂಪನ್ಮೂಲ ವ್ಯಕ್ತಿಯಾಗಿ ಸೇವೆ, ಹಲವಾರು ಪ್ರಬಂಧ – ಸಂಶೋಧನೆಗಳಿಗೆ ಪ್ರೇರಣ ಶಕ್ತಿಯಾದವರು.

ಕರ್ನಾಟಕ ಮಾಧ್ಯಮ ಅಕಾಡೆಮಿಯ 'ಆಂದೋಲನ' ಪ್ರಶಸ್ತಿ, ಕರ್ನಾಟಕ ರಾಜ್ಯ ಚುಟುಕು ಸಾಹಿತ್ಯ ಪರಿಷತ್ ನಿಡುವ ಪ್ರಶಸ್ತಿ, ಭಾರತ ಸೇವಾದಳ ಪುರಸ್ಕಾರ, ಕೋಲಾರ ರತ್ನ ಪ್ರಶಸ್ತಿ ಸೇರಿದಂತೆ ವಿವಿಧ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರು.

ಕೋಲಾರ ಪತ್ರಿಕೆ ಪ್ರಕಾಶನದ ಮುಖಾಂತರ ಡಿವಿಜಿ ಸಮಗ್ರ ಕೃತಿ ಪರಿಶೀಲನೆ, ಕರೆಯ ಹಾರ, ಕೋಲಾರ ಸುತ್ತಮುತ್ತಲ ದೇವಾಲಯ, 'ಶ್ರೀಕರ' – ಹೆಸರಲ್ಲಿ ಶ್ರೀ ಉಡುಪರ ಅಭಿನಂದನಾ ಗ್ರಂಥ, ಕುರುಡಮಾಲೆ ವಿನಾಯಕ, ಪ್ರೇಮದ ಮೊಗ್ಗು ಸೇರಿದಂತೆ ಬಹಳಷ್ಟು ಪ್ರಕಟಣೆ ಮಾಡಿದ್ದಾರೆ. ಇಳಿ ವಯಸ್ಸಿನಲ್ಲೂ ಪಾದರಸದಂತೆ ಕ್ರಿಯಾಶೀಲರಾಗಿರುವ ಕೆ.ಪ್ರಹ್ಲಾದರಾವ್ ಅವರಿಗೆ 2015ರ ಕರ್ನಾಟಕ ಮಾಧ್ಯಮ ಅಕಾಡೆಮಿಯ ಪ್ರಶಸ್ತಿ ಒಲಿದು ಬಂದಿದೆ.

## 'ಅಹಿಂದ' ಸಮುದಾಯದ ಅದ್ವಿತೀಯ ....



ಶ್ರೀಮುನಿಯಪ್ಪ

'ಸಂಚಿಕೆ' ದಿನಪತ್ರಿಕೆಯ ಸಂಪಾದಕರಾಗಿರುವ ಮುನಿಯಪ್ಪ, ಅತಿ ಹೆಚ್ಚು ದಲಿತ ಸಂಖ್ಯೆಯಿರುವ ಕೋಲಾರ ಜಿಲ್ಲೆಯಲ್ಲಿ ಸತತ ಎರಡೂವರೆ ದಶಕಗಳಿಂದ ಪತ್ರಿಕೆ ಮುನ್ನಡೆಸಿಕೊಂಡು ಬಂದಿದ್ದಾರೆ.

ಎಪ್ಪತ್ತರ ದಶಕದಲ್ಲಿ ಕೋಲಾರದಲ್ಲಿ ಆರಂಭವಾದ ದಲಿತ ಚಳವಳಿಯ ಸ್ಥಾಪಕ ಮುಖಂಡರಲ್ಲಿ ಪ್ರಮುಖರು. 2ಬಾರಿ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರಾಗಿಯೂ ಸೇವೆಗೈದಿದ್ದಾರೆ. ಕೋಲಾರ– ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಡೆಯುವ ಎಲ್ಲ ಜನಪರ

## ಕ್ರಿಯಾಶೀಲ ಪತ್ರಕರ್ತ



ಶ್ರೀ.ಸತ್ಯನಾರಾಯಣ

ರಾಯಚೂರು ಜಿಲ್ಲೆಯ 'ನಿತ್ಯನೂತನ','ರಾಯಚೂರುವಾಣಿ', ಬಳ್ಳಾರಿ ಜಿಲ್ಲೆಯ 'ಈ ನಮ್ಮ ಕನ್ನಡನಾಡು', ಸುದ್ದಿ ಸಂಸ್ಥೆ ಕೆ.ಎನ್.ಎನ್. 'ಉಷಾಕಿರಣ' ಸೇರಿದಂತೆ ಕಾವೇರಿ ವಾಹಿನಿಯಲ್ಲಿಸೇವಾನುಭವವಿರುವ ಕೆ.ಸತ್ಯನಾರಾಯಣ ಪ್ರಸ್ತುತ 'ಸಂಜೆವಾಣಿ' ಸಂಜೆ ಪತ್ರಿಕೆಯ ರಾಯಚೂರು ಆವೃತಿಯ ವರದಿಗಾರರಾಗಿಕಾರ್ಯನಿರತರು.


ನೇರ, ನಿಖರ ವರದಿಗಾರಿಕೆ ಇವರ ವೈಶಿಷ್ಟ್ಯ. ಪತ್ರಿಕಾರಂಗದ ಬಂಧುಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಇವರು ಎಲ್ಲರಿಗೂ ಆಪ್ತರು. ಬಹುತೇಕ ಕಡೆ ಸ್ಥಳೀಯ ಪ್ರಾದೇಶಿಕ ಪತ್ರಿಕೆಗಳಲ್ಲಿಯೇ ಸೇವೆ ಸಲ್ಲಿಸಿರುವ ಇವರಿಗೆ ಬಡ ಪತ್ರಕರ್ತರ ಸಮಸ್ಯೆಯ ಅರಿವಿದೆ. ಹೀಗಾಗಿ ಚಿಕ್ಕ ಪತ್ರಿಕೆಗಳ ವರದಿಗಾರರೊಂದಿಗೆ ಸಹಜ ನಂಟು.

ಹೈದರಾಬಾದ್ – ಕರ್ನಾಟಕ ಭಾಗದವರಾಗಿದ್ದರಿಂದ ಅಲ್ಲಿನ ಸಮಸ್ಯೆಗಳ ಬಗ್ಗೆ ವಿಶೇಷ ಕಾಳಜಿ ಹೊಂದಿದವರು. ಸರಕಾರಿ ಸೌಲಭ್ಯಗಳಿಂದ ವಂಚಿತರಾದ ಜನರ ಪ್ರಗತಿಗಾಗಿ ಮಿಡಿದವರಿವರು. ಅಲ್ಲದೆ, ಅರ್ಹ ಫಲಾನುಭವಿಗಳಿಗೆ ಸರಕಾರಿ ಸವಲತ್ತು ಕೊಡಿಸಿಯೇ ತೀರಬಲ್ಲ ಹಟವಾದಿ ಪತ್ರಕರ್ತರೆಂದು ಸತ್ಯನಾರಾಯಣ ಖ್ಯಾತಿ ಗಳಿಸಿದ್ದಾರೆ.

ನೆಹರು ಯುವ ಕೇಂದ್ರದ 1998 – 99 ನೇ ಸಾಲಿನ ಜಿಲ್ಲಾ ಕ್ರಿಯಾಶೀಲ ಯುವ ಪ್ರಶಸ್ತಿ, ಸುಶಮೀಂದ್ರತೀರ್ಥ ಪ್ರಶಸ್ತಿ, ವೈದ್ಯಕೀಯ ಸಂಘದಿಂದ ಉತ್ತಮ ವರದಿಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇದೀಗ ಪ್ರಸಕ್ತ ಸಾಲಿನ ಮಾಧ್ಯಮ ಅಕಾಡೆಮಿ ಪುರಸ್ಕಾರ ಒಲಿದು ಬಂದಿದೆ.

20–11–2015ರಂದು 40 ಪತ್ರಕರ್ತರಿಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಮುಂದುವರಿಯುವುದು....




ಸುಸಜ್ಜಿತ ಸುಂದರವಾದ ಮನೆಗಳು
Ready House Near Kavoor - 2 BHK
3.5cents 970 Sft
Near Chowki, Malemar - 8cents 1250Sft
READY BUILT HOUSE FOR SALE NEAR KULUR
4.34 Cents Land, 1,600 sft plinth Area
1.5 Acre and 18cents Land
Available Kodikal
Apartment at Urva.
2 BHK 930 SFT
& 1100 SFT
SINGLE BEDROOM APPT. AT
ASHOKNAGAR
10 Cents Residential Site
Near Panjimogaru
15 Cents at Chilimbi Mangalore
3.50 Acre & 2.5 Acre Land / Plots
Near International Airport Kenjaru
7 km From Mangalore City.
And Many More Properties
Contact : MAASS Realators,
Mangalore. +917899284477

## ಕಥೆ

# ಅಂತರಾಳದ ಮಾತುಗಳು

– ತಾರನಾಥ್ ಜೆ. ಮೇಸ್ತ. ಶಿರೂರು.

ಕಲ್ಪನೆಯ ಭಾವದಲ್ಲಿರುವ ಕವಿತೆಯಂತೆ.... ಶಿಲ್ಪ ಕಲೆಗಳ ಅಂದ, ಕಲಾವಿದನ ಸುತ್ತಿಗೆಯ ಪೆಟ್ಟಿನಿಂದ ಅರಳಿದ ರಾಮಾಯಣ, ಮಹಾಭಾರತ ..... ಕಥಾರೂಪಕಗಳ ಕೆತ್ತನೆಯ ಚಿತ್ರಗಳು, ಕುಂಚ ಕಲಾವಿದನ ಕುಂಚದಿಂದ ಗೋಡೆಯ ಮೇಲೆ ಮೂಡಿದ ರಂಬೆ, ಊರ್ವಶಿ, ಮೇನಕೆ ದೇವಕನ್ಯೆಯರ ಚಿತ್ತಾರಗಳು..... ಜೀವಂತಿಕೆಯ ಕನ್ಯೆಯರಂತೆ, ಜೀವಕಳೆ ಕೊಟ್ಟಿರುವ ಕಲಾವಿದನ ಕೈಚಳಕ ಅದ್ಭುತ....! ನೋಡುತ್ತಿದ್ದಂತೆಯೇ " ಎಕ್ಸ್.... ಕ್ಯೂಜ್ ..... ಮೀ..."! ಹೆಣ್ಣಿನ ಧ್ವನಿ ಬಂದತ್ತ ತಿರುಗಿದೆ. ಆಗಲೇ ವೀಕ್ಷಣೆಯಲ್ಲಿ ಮೈಮರೆತ ನಾನು ವಾಸ್ತವ ಲೋಕಕ್ಕೆ ಬಂದದ್ದು.

ಆಕೆ.... ಹದಿ ಹರೆಯದ ಯುವತಿ. ಆಕೆಗೇನೋ ಇಪ್ಪತ್ತೈದರ ಹರೆಯ ಇರಬಹುದು. ಆಕೆಯ ಮುಖಭಾವ ದೇಹಾಕೃತಿಯ ಮೇಲೆ ಕಣ್ಣಾಡಿಸಿದೆ. ಎತ್ತರ ದೇಹಕಾಯ, ಸೌಂದರ್ಯದಲ್ಲಿ ಅಪ್ರತಿಮ ಸುಂದರಿ. ಹಸಿರು ಬಣ್ಣದ ಚೂಡಿದಾರ ಧರಿಸಿದ್ದಾಳೆ. ವಿವಾಹಿತಳು ಎನ್ನಲು ಕತ್ತಿನಲ್ಲಿ ತಾಳಿ, ಕಾಲಲ್ಲಿ ಕಾಲುಂಗುರ ಗೋಚರಿಸಲಿಲ್ಲ. ಹೆಗಲಲ್ಲಿ ಪ್ರವಾಸಿ ಬ್ಯಾಗು. ಶ್ರೀಕ್ಷೇತ್ರ ದರ್ಶನಕ್ಕೆ ಬಂದಿರುವ ಪ್ರವಾಸಿಯಾಗಿರಬೇಕು ಎಂದೆನಿಸಿಕೊಂಡೆ.

ಸನಿಹ ಬಂದವಳೇ.... "ತಾವು ಸ್ಥಳಿಯರೇ....?" ಎಂದೆನ್ನುತ ಮಾತಿಗೆ ಶುರು ಮಾಡಿದಳು. ಅವಳ ಪ್ರಶ್ನೆಗೆ ಹೌದೆನ್ನುತ ನಾನು ತಲೆ ಅಲಾಡಿಸಿದೆನು. ಉಡುಪಿ




ಕ್ಷೇತ್ರದ ಪರಿಚಯ ಇತಿಹಾಸ ಮಾಹಿತಿ ಸಂಗ್ರಹಿಸುವುದು ಅವಳ ಉದ್ದೇಶವಾಗಿತ್ತು. ಅವಳು ಪ್ರವಾಸಿಯಾದರೂ ಅವಳ ಲೋಕಜ್ಞಾನ ಸಂಪಾದನೆ ಮಾಡುವ ನಡತೆ ಸಂತೋಷ ತಂದಿತು. ನಾನೇನೋ..... ಸಾಹಿತ್ಯ ಬರಹಗಾರ...... ಓದುಗ ಹಾಗಾಗಿ ಉಡುಪಿ ಕ್ಷೇತ್ರ ಚರಿತ್ರೆಯ ಜ್ಞಾನ ನನ್ನಲ್ಲಿತ್ತು. ಕ್ಷೇತ್ರ ಪರಿಚಯವನ್ನು ಅವಳಿಗೆ ಧಾರೆ ಎರೆಯುವುದು ಸೂಕ್ತವೆನಿಸಿತು.

ಶ್ರೀಕೃಷ್ಣನಿಂದ ನಿರ್ವಾಣವಾದ ದ್ವಾರಕದಿಂದ ರತ್ನಾಕರ ಸಮುದ್ರದ ಮುಖಾಂತರ ಹಡಗಿನಲ್ಲಿ ಶ್ರೀ ಮಧ್ವಾಚಾರ್ಯರು ದೇವಶಿಲ್ಪಿ ವಿಶ್ವಕರ್ಮನಿಂದ ಕೆತ್ತಲ್ಪಟ್ಟ ಶ್ರೀಕೃಷ್ಣ, ಬಲರಾಮ, ದುರ್ಗಾದೇವಿ ಸಹಿತ ವಿಗ್ರಹಗಳನ್ನು ತಂದು ಕ್ರಮವಾಗಿ ವಡಬಾಂಡೇಶ್ವರ, ರಜತಪೀಠಪುರ, ಕುಂಜಾರುಗಿರಿ, ಕ್ಷೇತ್ರಗಳಲ್ಲಿ ಪ್ರತಿಷ್ಠಾಪಿಸಿದ ಚರಿತ್ರೆ ವಿವರವಾಗಿ ತಿಳಿಸಿದೆ. ಮೂರು ಶತಮಾನಗಳ ಕಂಡ ವಾದಿರಾಜ ಶ್ರೀಪಾದರ ಕಥೆ, ಕನಕನ ಕಿಂಡಿಯ ಮುಖಾಂತರ ಶ್ರೀಕೃಷ್ಣನ ಕಂಡ ಕನಕದಾಸರ ಕಥೆ, ಉಡುಪಿಯ ನಾಡಹಬ್ಬ ಪರ್ಯಾಯ ಮಹೋತ್ಸವ, ಅಷ್ಟಮಠಗಳ ಪರಂಪರೆ, ಅಷ್ಟಯತಿಗಳ ವಿವರಗಳೊಂದಿಗೆ, ಉಡುಪಿ ಕೃಷ್ಣಮಠದ ಎಂಟುನೂರು ವರ್ಷಗಳ ಭವ್ಯ ಇತಿಹಾಸವನ್ನು ಅವಳಿಗೆ ತಿಳಿಸಿದೆ. ಕೇಳುತ್ತಿದ್ದಂತೆಯೇ ಅವಳು ಆಶ್ಚರ್ಯಚಕಿತಳಾದಳು. ಅವಳ ಬಗ್ಗೆ... ಪೂರ್ವಾಪರ ಯಾವುದೂ ಅರಿವಿಲ್ಲ. ಅವಳ ಬಗ್ಗೆ ಖಾಸಗಿ ವಿಚಾರಗಳನ್ನು ತಿಳಿದುಕೊಳ್ಳುವ ಕುತೂಹಲದಿಂದ ಅವಳ ಬಗ್ಗೆ ಕೇಳಿಯೇ ಬಿಟ್ಟೆ, ಆಗ.... ಆಕೆ, ನಗುಮುಖದಿಂದ ದೃಷ್ಟಿಹಾಯಿಸಿ ಅದಕ್ಕೇನಂತೆ....! ಸ್ನೇಹ ಸಂಬಂಧಗಳಿಗೆ ಖಾಸಗಿ ವಿಚಾರಗಳೇ ಗಟ್ಟಿಯಾದ ತಳಹದಿ. ಉತ್ತಮ ಸ್ನೇಹಕ್ಕೆ ಸುಗಮ ಮಾರ್ಗೋಪಾಯ ಎಂದೆನ್ನುತ್ತಾ ತನ್ನ ವಾಸ್ತವ ವಿಚಾರಗಳನ್ನು ಹೇಳಲಾರಂಭಿಸಿದಳು.

ಕುದುರೆಮುಖ ರಕ್ಷಿತ ಅರಣ್ಯ ಸನಿಹ ಹಳ್ಳಿಯೊಂದರಲ್ಲಿ ಅವಳ ವಾಸ್ತವ್ಯ. ಕೃಷಿ ಕುಟುಂಬದಿಂದ ಬಂದ ಅವಳು ಮಾತಾ ಪಿತರಿಗೆ ಎರಡು ಹೆಣ್ಣುಮಕ್ಕಳಲ್ಲಿ ಮೊದಲನೆಯವಳು ಚಂದ್ರಿಕಾ ಯಾನೆ ರೇಖಾ. ಹಲವು ಹೆಸರುಗಳಿಂದ ಗುರುತಿಸಿಕೊಂಡಿದ್ದಾಳೆ. ಎಂ. ಎಸ್.ಡಬ್ಲ್ಯು ಸ್ನಾತಕೋತ್ತರ ಪದವೀಧರೆ, ಕಾಲೇಜು ದಿನಗಳಲ್ಲಿ ಅಂಕಗಳಿಗೆ, ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಗಳಲ್ಲಿ ಚತುರೆ. ತಾನು ಅಧ್ಯಯನ ಮಾಡಿದ ವಿಷಯದ ಧರ್ಮದಂತೆ ಬಡವರು, ಅಂಗವಿಕಲರ ಬಗ್ಗೆ ಕರುಣೆ. ಪರಿಸರಕ್ಕೆ ಮಾರಕವಾಗುವ ಉದ್ಯಮಗಳ ವಿರುದ್ಧ ಹೋರಾಟ.... ಮುಂತಾದವುಗಳು ಅವಳ ಸಮಾಜಸೇವೆ ಮನೋಭಾವವಾಗಿತ್ತು..... ಅದರಂತೆ ಮುದ್ರಣ ಮಾಧ್ಯಮಗಳಲ್ಲಿ ಸಾರ್ವಜನಿಕ ಧ್ವನಿಯಾಗಲು ಲೇಖನಗಳನ್ನು ಬರೆದು ಸಮಾಜದ ಅಸ್ತವ್ಯಸ್ತಗಳಿಗೆ ಹೋರಾಟದ ಕಿಚ್ಚಾಗುತ್ತಿದ್ದಳು. ನ್ಯಾಯಪರ ಹೋರಾಟದಿಂದ ಜನಬೆಂಬಲದ ಶಕ್ತಿಯನ್ನು ಪಡೆದಿದ್ದಳು.

ಮಲೆನಾಡ ಪ್ರದೇಶದಲ್ಲಿ ಆವಾಗಲೇ ಸಾಮಾಜಿಕ ಅಸಮಾನತೆಯ ವಿರುದ್ಧ ಬಂಡೇಳುವ ಸದಾಶಯದಿಂದ ಹುಟ್ಟಿಕೊಂಡಿದ್ದು, ನಕ್ಸಲ್ ಸಂಘಟನೆ, ಉಳ್ಳವರಿಂದು ಕಿತ್ತು, ಇಲ್ಲದವರಿಗೆ ಹಂಚುವ ಧ್ಯೇಯವಾಕ್ಯ ಅವರದು, ಮಾವೋವಾದಿ ಸಂಘಟನೆ ಅವಳನ್ನು ಕೈಬೀಸಿ ಕರೆಯಿತು. ತನ್ನ ಸಮಾಜ ಸೇವೆ ಕರ್ತವ್ಯಕ್ಕೆ ವೇದಿಕೆವೆಂಬಂತೆ ಚಂದ್ರಿಕಾ ಯಾನೆ ರೇಖಾ.... ನಕ್ಸಲ್ ಸಂಘಟನೆಗೆ ಸೇರಿಕೊಂಡಳು. ಆದರೆ.... ಚಂದ್ರಿಕಾಳ ಮಹದಾಶೆಯಂತೆ, ನಕ್ಸಲ್ ಸಂಘಟನೆ ವೇದಿಕೆಯಾಗಲಿಲ್ಲ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡುವ ನಕ್ಸಲೀಯ ಚಳವಳಿ ಉದ್ದೇಶಿತ ಗುರಿ ತಪ್ಪಿಸುವ ಭಯೋತ್ಪಾದನೆಯ ಚಳವಳಿ ಎನಿಸಿತು. ದೇಶಕ್ಕೆ ಭದ್ರತೆಗೆ ಮಾರಕವಾಯಿತು.

"ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ.... ಅನ್ಯಾಯದ ವಿರುದ್ಧ ಸೆಣಸಾಟ" ಎಂಬ ಧ್ಯೇಯವಾಕ್ಯದೊಂದಿಗೆ ಚಳವಳಿ ನಡೆಸುತ್ತಿದ್ದ ಚಟುವಟಿಕೆ ಹಳಿ ತಪ್ಪಿ ರಕ್ತಪಾತಕ್ಕಿಳಿಯುವ ಪೈಶಾಚಿಕ ಕೃತ್ಯಕ್ಕೆ ಶರಣಾಗಿದೆ. ಮಲೆನಾಡ ಪ್ರದೇಶಗಳಲ್ಲಿ ಬಂದೂಕಿನ ಧ್ವನಿ ಮೊಳಗುತ್ತಿದೆ. ಮಲೆನಾಡ ಜನತೆಗೆ ಒಂದೆಡೆ ಪೊಲೀಸರ ಕಿರುಕುಳ. ಇನ್ನೊಂದೆಡೆ ನಕ್ಸಲರ ಕಿರುಕುಳ. ಅಡ್ಡಕತ್ತರಿಯಲ್ಲಿ ಸಿಕ್ಕಿದಂತಾಗಿದೆ ಬಡ ಜನತೆಯ ಬದುಕು.

ಇವೆಲ್ಲಾ.... ನಕ್ಸಲ್ ಸಂಘಟನೆಯ ಸಮಾಜಘಾತುಕ ಕೃತ್ಯಗಳು. ಇವೆಲ್ಲಾ ನನ್ನ ವಿದ್ಯಾಭ್ಯಾಸದ ಅರ್ಥಕ್ಕೆ ವಿರುದ್ಧವಾಗಿದೆ. ನಾನು ಕಂಡ ಕನಸುಗಳಿಗೆ ಮಾರಕವಾಗಿದೆ. ಒಳ್ಳೆಯ ಮನದಾಸೆ.... ಧ್ಯೇಯದಿಂದ ಒಗ್ಗಟನಿಂದ ಬಲವಿದೆ ಎನ್ನುವ ನಂಬಿಕೆಯಿಂದ ಸಂಘಟನೆ ಸೇರಿದೆ. ನಕ್ಸಲ್ ವಿಷವರ್ತುಲಗಳಿಗೆ ಸಿಲುಕಿ ಪೊಲೀಸರ ಗುಂಡಿಗೆ ಎದೆಕೊಡುವ ಪರಿಸ್ಥಿತಿ ನನ್ನದಾಗಿದೆ. ನನ್ನ ತಲೆಯ ಮಾಹಿತಿಗೆ ಸರಕಾರ ಬಹುಮಾನ ಘೋಷಿಸಿದೆ. ಸಾರ್ವಜನಿಕ ಸ್ಥಳಗಳಲ್ಲಿ 'ಬೇಕಾಗಿದ್ದಾರೆ' ಎನ್ನುವ ತಲೆಬರಹ ನಕ್ಸಲ್ ಹಣೆಪಟ್ಟಿಕೊಟ್ಟು, ಭಾವಚಿತ್ರವಿರುವ ಕರಪತ್ರಗಳನ್ನು ಅಂಟಿಸಿದ್ದಾರೆ. ಸಮಾಜಸೇವಾ ಮನೋಭಾವನೆಯಿಂದ ಹೆತ್ತ , ಮಾತಾಪಿತರನ್ನು ತ್ಯಜಿಸಿ ಬಂದೆ. ಅವಕಾಶವೇ ಹೊದಿಕೆ, ನೆಲವೇ ಚಾಪೆಯಂತೆ ಅರಣ್ಯದಲ್ಲಿ ಗಾಳಿ, ಮಳೆ, ಬಿಸಿಲ ತಾಪಮಾನ, ಪ್ರಪಂಚದ ಸಂಬಂಧಗಳಿಲ್ಲದೇ ಬದುಕುತ್ತಿದ್ದೇನೆ. ಇವು ನನ್ನ ರಕ್ತ ಚರಿತ್ರೆಯ ಬದುಕಿನ ಅಂತರಾಳದ ಮಾತುಗಳು.

ಅವಳ ರಕ್ತ ಚರಿತ್ರೆಯ ಚಿಂತಾಜನಕ ಬದುಕಿನ ಕಥೆ ಕೇಳಿ ನನಗರಿಯದೇ ನನ್ನ ಕಣ್ಣಂಚಿನಲ್ಲಿ ನೀರಹನಿಗಳು ಬರಲಾರಂಭಿಸಿದ್ದವು. ಗುಲಾಬಿಯಂತೆ ಅರಳಿದ ಅವಳ ಮುಖದ ಮೇಲೆ ಕಣ್ಣಾಡಿಸಿದೆ.... ಬಾಡಿದ ಗುಲಾಬಿಯಂತೆ ಅವಳ ಮುಖ ಸಪ್ಪೆಯಾಗಿತ್ತು. ಅವಳ ಕಣ್ಣುಗಳಿಂದ ಅಶ್ರುಧಾರೆ ಹರಿಯುತ್ತಿತ್ತು..... ಪರಿಸ್ಥಿತಿಯು ನಮ್ಮಿಬ್ಬರ ನಡುವೆ ಮೌನದ ತೆರೆ ಎಳೆಯಿತು. ಸನ್ನಿವೇಶವನ್ನು ಅರ್ಥೈಸಿಕೊಂಡ ನಾನು ಮಾತಿನ ಹಾದಿಯನ್ನು ಬದಲಾಯಿಸಿದೆ.

"ಈಗ ತಾವು.... ಉಡುಪಿಗೆ ಬಂದ ಉದ್ದೇಶ....? ಮತ್ತು ತಾವು ಸಮಾಜದ ಮುಖ್ಯವಾಹಿನಿಗೆ ಬರಬಹುದಲ್ಲವೇ ? ನಿಮ್ಮದು ತಪ್ಪಿಲ್ಲ ನಿಜ.... ಪರಿಸ್ಥಿತಿ ನಿಮ್ಮನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ಕಾನೂನಿಗಿಂತ ಯಾರೂ ದೊಡ್ಡವರಲ್ಲ ಕಾನೂನಿಗೆ ಶಿರಬಾಗಲೇಬೇಕು. ಹಾಗಾಗಿ ಕಾನೂನಿಗೆ ಶರಣಾಗತಳಾಗುವುದು ಉತ್ತಮ. ಶಿಕ್ಷೆ ಕಡಿಮೆಯಾಗಹುದು. ಬದುಕಿನ ಮುಖ್ಯ ವಾಹಿನಿಗೆ ಸೇರಬಹುದಲ್ಲವೇ....!"

"ಮಾನಸಿಕ ನೆಮ್ಮದಿಗೋಸ್ಕರ ಧ್ಯಾನಚಿತ್ತಳಾಗಿ ದೇವರ ಸ್ಮರಣೆ ಮಾಡಲು ದೇವಸ್ಥಾನಕ್ಕೆ ಬಂದಿದ್ದೆ. ಅರಣ್ಯದ ನಮ್ಮ ಅಡಗುತಾಣದಲ್ಲಿ ಆಹಾರ ಸಾಮಾಗ್ರಿಗಳು ಖಾಲಿಯಾಗಿವೆ. ಹವಾಮಾನದ ವೈಪರೀತ್ಯದಿಂದ ನಮ್ಮ ತಂಡದ ಸದಸ್ಯರಿಗೆ ರೋಗ ರುಜಿನಗಳು ಬರಲಾರಂಭಿಸಿದೆ. ಪ್ರಥಮ ಚಿಕಿತ್ಸೆಗೆ ಔಷಧಿಗಳ ಅವಶ್ಯಕತೆಯಿದೆ. ಹಾಗಾಗಿ ಉದ್ದೇಶಪೂರ್ವಕವಾಗಿ ಬರಬೇಕಾಯಿತು. ನಿಮ್ಮ ಮಾತುಗಳು ಅರ್ಥಪೂರ್ಣ. 'ಮಾಡಿದ್ದುಣ್ಣೊ ಮಾರಾಯ' ಎಂಬಂತೆ ಎಲ್ಲವನ್ನೂ ಪಾಲಿಗೆ ಬಂದದ್ದು ಪಂಚಾಮೃತವೆಂದು ಸ್ವೀಕರಿಸಬೇಕಾಗಿದೆ". ಹೀಗೆಂದು ಕಡ್ಡಿ ಮುರಿದಂತೆ ಹೇಳಿಬಿಟ್ಟಳು.

ಕರಾವಳಿ ಭಾಗದಲ್ಲಿ ಭಯೋತ್ಪಾದಕರ ಸಂಚಾರದ ಕರಿನೆರಳಿದ್ದರಿಂದ ವಿಧ್ವಂಸಕ ಕೃತ್ಯಗಳು ನಡೆಯುವ ಭೀತಿಯಿಂದ ಶಸ್ತ್ರಧಾರಿ ಆರಕ್ಷಕ ಕಾವಲಿದೆ. ಬೀದಿಯಲ್ಲಿ ವಾಹನಗಳ ಸಂಚಾರ ಸುರಕ್ಷತೆಯ ದೃಷ್ಟಿಯಿಂದ ನಿಷೇಧಿಸಲಾಗಿದೆ. ಖಾಕಿ ಸಮವಸ್ತ್ರ ಧರಿಸಿದ ಆರಕ್ಷಕ ಪೇದೆಯೊಬ್ಬ ಬಂದೂಕು ಹಿಡಿದು, ರಥಬೀದಿಯಲ್ಲಿ ಗಸ್ತು ತಿರುಗುತ್ತಿದ್ದ.

ಆ ಸನ್ನಿವೇಶವನ್ನು ನೋಡಿದ ಚಂದ್ರಿಕಾ ಯಾನೆ ರೇಖಾಳ ಮೈ ಬೆವರತೊಡಗಿತು. ಗಾಬರಿಯಿಂದ ".... ನಾನಿಲ್ಲಿ ತುಂಬ ಹೊತ್ತು ಇದ್ದರೆ ಜೀವಕ್ಕೆ ಅಪಾಯವಿದೆ. ತಾನಿನ್ನು ಬರುತ್ತೇನೆಂದು ವೇಗದ ನಡಿಗೆಯಲ್ಲಿ ಕ್ಷಣಾರ್ಧದಲ್ಲಿ ರಥಬೀದಿಯಿಂದ ಕಣ್ಮರೆಯಾಗಿಬಿಟ್ಟಳು. ಕೊನೆಗೂ..... ಅವಳ ಅನುಭವದ ಅಂತರಾಳದ ಮಾತುಗಳು ನೆನಪಿನ ಚಿತ್ತಾರವಾಗಿ ಮನದಲ್ಲಿ ಅಚ್ಚಾಗಿ ಉಳಿಯಿತು. ●

## ಮಿನಿಕಥೆ

# ನನ್ನ ಮಗ

ಒಂದು ಊರಿನಲ್ಲಿ 3 ಮಹಿಳೆಯರು ನೀರು ತುಂಬಿಸುತ್ತಿದ್ದರು.

ಮೊದಲನೆಯವಳ ಮಗ ಶಾಲೆಯಿಂದ ಅದೇ ದಾರಿಯಲ್ಲಿ ಹೋಗುತ್ತಿರುವಾಗ ತಾಯಿಯ ಕಡೆ



ನೋಡಿದ. ಆವಾಗ ತಾಯಿ "ಅವನೆ ನನ್ನ ಮಗ, ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿಯುತ್ತಿದ್ದಾನೆ".

ಸ್ವಲ್ಪ ಸಮಯದ ನಂತರ ಎರಡನೆಯವಳ ಮಗ ಅದೇ ದಾರಿಯಿಂದ ಶಾಲೆಯಿಂದ ಹಿಂತಿರುಗುವುದನ್ನು ತೋರಿಸಿ "ಅವನೆ ನನ್ನ ಮಗ, ಸಿಬಿಎಸ್‌ನಲ್ಲಿ ಓದುತ್ತಿದ್ದಾನೆ".

ಅವನ ಹಿಂದಿನಿಂದ ಮೂರನೆಯವಳ ಮಗ ಕೂಡಾ ಶಾಲೆಯಿಂದ ಮನೆಯ ಕಡೆ ಹೋಗುತ್ತಿದ್ದ. ತಾಯಿಯನ್ನು ನೋಡಿ ಅವಳ ಹತ್ತಿರ ಬಂದು ನೀರಿನಿಂದ ತುಂಬಿದ ಕೊಡವನ್ನು ಹೆಗಲ ಮೇಲೆ ಮತ್ತು ಬಾಲ್ಟಿನ್ನು ಇನ್ನೊಂದು ಕೈಯಲ್ಲಿ ಹಿಡಿದು ತಾಯಿಯ ಕಡೆ ನೋಡಿ "ಅಮ್ಮ ಬನ್ನಿ ಮನೆಗೆ ಹೋಗುವ" ಅಂದ. ತಾಯಿ ಅವನ ಕಡೆ ಕೈ ತೋರಿಸಿ, ಸಂತೋಷದಿಂದ "ಇವನೇ ನನ್ನ ಮಗ, ಸರಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದಾನೆ" ಅಂದಳು. ಇದನ್ನು ಕೇಳಿ ಮತ್ತಿಬ್ಬರು ನಾಚಿಕೆಯಿಂದ ತಲೆ ಬಾಗಿಸಿದರು.

ಮೇಲಿನ ಕತೆಯ ತಾತ್ಪರ್ಯ ಇಷ್ಟೆ, "ಲಕ್ಷಗಟ್ಟಲೆ ಹಣ ಖರ್ಚು ಮಾಡಿದರೂ ಸಂಸ್ಕಾರ ಖರೀದಿ ಮಾಡಲು ಸಾಧ್ಯವಿಲ್ಲ.....!!"

# ಅಮ್ಮ



ಈ ಜೀವನದಲ್ಲಿ ಮೊದಲೂ ತಾಯಿ
ಅಳ್ತಾ ಇದ್ಲು
ಯಾಕೆ ಗೋತ್ತಾ...?
ತನ್ನ ಮಗು ಊಟಾ ಮಾಡ್ತಾ ಇಲ್ಲಾ
ಅಂತ.
ಇವಾಗ್ಲೂ ತಾಯಿ ಅಳತ್ತಾನೆ ಇದ್ದಾಳೆ
ಯಾಕೆ ಗೋತ್ತಾ...?
ನಾನೂ ಜನ್ಮ ಕೊಟ್ಟು
ಬೆಳೆಸಿದ ಮಗ ನನಗೆ ಊಟಾ ಕೊಡ್ತಾ
ಇಲ್ಲ ಅಂತ.
ಒಂದು ಕ್ಷಣ ಯೋಚನೆ ಮಾಡಿ
ಫ್ರೆಂಡ್ಸ್
ಈ ದೇಹ ತಾಯಿ ಕೊಟ್ಟ ಭಿಕ್ಷೆ.
ಅವಳು ಮನಸ್ಸು ಮಾಡಿ ಜನ್ಮ
ಕೊಟ್ಟಿದಕ್ಕೆ...
ಈ ಜಗತ್ತಿನ ಮುಖ ನೋಡುತ್ತಿದ್ದೇವೆ.
ಅವಳು ಯಾವ ದೇವರಿಗಳಿಗಿಂತಲೂ
ಯಾವುದರಲ್ಲಿಯೂ ಕಡಿಮೆ ಇಲ್ಲ
ದೇವರು ತಡವಾಗಿ ನಮ್ಮನ
ನೋಡ್ತಾನೆ.

ಆದರೆ ತಾಯಿ ಹಾಗಲ್ಲ,
ಅಮ್ಮಾ ಅಂದ ಕ್ಷಣ ಓಡಿ
ಬರುತ್ತಾಳೆ.
ಪ್ಲೀಸ್ ಫೆಂಡ್ಸ್,
ನನ್ನೆಲ್ಲ ಗೆಳೆಯ /
ಗೆಳೆಯರ ಹತ್ತಿರಾ...
ಮತ್ತೆ ನನ್ನ ಪ್ರೀತಿಯ ಅಕ್ಕ
/ ತಂಗಿಯ ಹತ್ತಿರಾ...
ನಿಮ್ಮಲ್ಲಿ ವಿನಂತಿಸುವುದಿಷ್ಟೆ
ಪ್ರತಿಯೊಬ್ಬರಲ್ಲಿ ನನ್ನದೊಂದು ಚಿಕ್ಕ
ಕೋರಿಕೆ...
ಈ ಭೂಮಿ ಮೇಲೆ ಯಾವ
ತಾಯಿನೂ ಕೂಡ "ಉಪವಾಸ"
ಇರಕೂಡದು.
ಅದೊಂದೆ ನನ್ನ ಕೋರಿಕೆ
ಪ್ಲೀಸ್ ತಾಯಿನೇ ದೇವರೂ...
ತಾಯಿನೇ ಸರ್ವಸ್ವ...
ತಾಯಿನೇ ಜಗತ್ತು...
ಅನ್ನೋರಿಗೆ ತಾಯಿ ಪ್ರೀತಿ
ಗೋತ್ತಿರತ್ತೆ...



# ಕಲಶಾರಾಧನೆ



ಭಾರತೀಯ ಸಂಸ್ಕೃತಿಯಲ್ಲಿ ನಮ್ಮ ವೈದಿಕ ಪರಂಪರೆಯಲ್ಲಿ ಎಲ್ಲಾ ತರಹದ ಪೂಜೆಗಳಲ್ಲಿ ಜಲತತ್ತ್ವದ ಪೂಜೆಯು ಬಹಳ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಕಲಶಾರಾಧನೆಯ ಬಗ್ಗೆ ಕಿರು ಲೇಖನವನ್ನು ತಮ್ಮೆಲ್ಲರ ಮುಂದಿಡುತ್ತೇನೆ.

ಭಗವಂತನು ನಮ್ಮ ಜೀವನದ ಉದ್ದಾರಕ್ಕೋಸ್ಕರ ಅನೇಕ ರೀತಿಯ ಸವಲತ್ತುಗಳನ್ನು ಮನುಷ್ಯರಿಗಲ್ಲದೆ ಸಮಸ್ತ ಜೀವರಾಶಿಗಳಿಗೂ ಅನುಗ್ರಹಿಸಿರುತ್ತಾನೆ. ಅದರಲ್ಲಿ ಭೂಮಿ, ನೀರು, ಅಗ್ನಿ, ವಾಯು, ಆಕಾಶಗಳೆಂಬ ಪಂಚತತ್ತ್ವಗಳು ಅತೀ ಮಹತ್ವವನ್ನು ಹೊಂದಿರುತ್ತದೆ. ಎಲ್ಲಾ ಪೂಜಾ ವಿಧಿ ವಿಧಾನಗಳಲ್ಲಿ ಮುಖ್ಯವಾಗಿ ಉಪಯೋಗಿಸಲ್ಪಡುವುದೇ ಜಲತತ್ವ. ವೈದಿಕ ವಿಧಿಗಳಲ್ಲಿ ಕಲಶಾರಾಧನಾ ಪೂರ್ವಕವಾಗಿ ಮಾಡತಕ್ಕ ಕಲ್ಪೋಕ್ತ ಪೂಜೆಯು ಬಹಳವಾಗಿ ಪ್ರಚಲಿತದಲ್ಲಿದೆ. ಶ್ರೀ ಸತ್ಯ ನಾರಾಯಣ ವೃತ, ನಾಗರಪಂಚಮಿ, ವಿನಾಯಕ, ವರಮ ಮಹಾಲಕ್ಷ್ಮಿ, ಸೋಮವಾರ ವೃತ, ಸ್ವರ್ಣ ಗೌರಿ, ಮಂಗಳ ಗೌರಿ, ಅನಂತಪದ್ಮನಾಭ ವೃತ, ಋಷಿಪಂಚಮಿ ವೃತ ಇತ್ಯಾದಿ ಎಲ್ಲಾ ಪೂಜೆಯಲ್ಲಿಯೂ ಕಲಶವೇ ಪ್ರಧಾನ ಪಾತ್ರ ವಹಿಸುತ್ತದೆ.

ಕಲಶದ ಮುಖ ಭಾಗದಲ್ಲಿ ವಿಷ್ಣುವಿನ ಸನ್ನಿಧಾನ ಕುತ್ತಿಗೆ ಭಾಗದಲ್ಲಿ ರುದ್ರ ದೇವರು ಮೂಲ ಭಾಗದಲ್ಲಿ ಬ್ರಹ್ಮ ದೇವರು. ಮಧ್ಯ ಭಾಗದಲ್ಲಿ ಮಾತೃಕಾ ದೇವತೆಗಳು, ಹೊಟ್ಟೆಯ ಭಾಗದಲ್ಲಿ ಸಮಸ್ತ ಸಾಗರಗಳೂ ಸಪ್ತದ್ವೀಪಗಳು ಭೂದೇವೀ ಸಾನ್ನಿಧ್ಯವೂ ನೆಲೆಸಿರುತ್ತದೆ. ಶಾಂತಿ ದೇವತೆಗಳು ಗಾಯತ್ರೀ, ಸಾವಿತ್ರೀ, ಸರಸ್ವತಿ ದೇವಾಧಿ ದೇವತೆಗಳೂ ಅಲ್ಲದೆ ಗಂಗಾದಿ ಸರ್ಚ ದೇವತಾ ಸನ್ನಿಧಾನವು ಕಲಶದಲ್ಲಿ ನೆಲೆಸಿರುತ್ತದೆ.

ಕಲಶಾರಾಧನ ಸಮಯದಲ್ಲಿ ಗಂಗಾದಿ ಸರ್ವತೀರ್ಥಗಳನ್ನು ಋಷಿವಂದೊಧ್ಯಾನ ಮೂಲಮಂತ್ರಾಭಿಮಂತ್ರಣ ಸಹಿತವಾಗಿ ಆರಾಧಿಸಬೇಕು. ಕಲಶದ ಬುಡದಲ್ಲಿ ಇರಿಸತಕ್ಕ ಭತ್ತವು ಪಾದದ ಸಂಕೇತ. ನಂತರ ಅಕ್ಕಿಯು ಮೊಣಕಾಲು ಹಾಗೂ ಮಂಡಿಯ ಸಂಕೇತ. ಅಕ್ಕಿಯ ಮೇಲೆ ಇರಿಸತಕ್ಕ ಅಡಿಕೆಗಳು ಇಂದ್ರಾದಿ ದಿಕ್ಪಾಲಕರ ಸಂಕೇತ. ಕಲಶಕ್ಕೆ ಸುತ್ತುವ ನೂಲು ನಾಡೀ ಸಂಕೇತ. ಕಲಶದೊಳಗೆ ಪಂಚವ್ಯವನ್ನು ಸೇರಿಸುವ ಪದ್ಧತಿಯೂ ಇದೆ. ಪಂಚಗವ್ಯವೆಂದರೆ ಗೋಮೂತ್ರ, ಗೋಮಯ, ಹಾಲು, ಮೊಸರು, ಆಕಳ ತುಪ್ಪ ಹಾಗೂ ಕುಶೋದಕ. ಎಲ್ಲಾ ದ್ರವ್ಯಗಳಿಗೆ ಸಂಬಧಿಸಿದ ಮಂತ್ರಗಳ ಮೂಲಕ ಆಯಾಯ ದೇವತೆಗಳನ್ನು ಆವಾಹಿಸಿ ಪೂಜಿಸಬೇಕು. ಕಲಶದ ಪಾತ್ರೆಯು ತಾಮ್ರದ್ದು ಆಗಿದ್ದಲ್ಲಿ ಪಂಚಗವ್ಯವನ್ನು ಸೇರಿಸುವುದು ಸಮಂಜಸವಲ್ಲ. ಕಲಶದಲ್ಲಿ ಇರಿಸತಕ್ಕ ಪಂಚಪಲ್ಲವಗಳು ನಮ್ಮ ಶರೀರದೊಳಗಿರುವ ನಾಡಿಗಳ ಸಂಕೇತ. ಪಂಚಪಲ್ಲವಗಳೆಂದರೆ ಅಶ್ವತ್ಥ, ಅತ್ತಿ, ಕಿರ್ಗೋಳಿ, ಮಾವು ಈ ವೃಕ್ಷಗಳ ತುದಿಗಳು. ವಿಶೇಷವಾದ ತಂಥೋದಕ ಹಾಗೂ ಕೆಲವು ಕ್ಷೀರ ವೃಕ್ಷದ ತೊಗಟೆಯ ಕಷಾಯದೊಂದಿಗೆ ಶತೌಷಧಿಯನ್ನೂ ಸೇರಿಸಬೇಕು. ಅದು ರಕ್ತದ ಸಂಕೇತ. ಕಲಶದಲ್ಲಿ ಇರಿಸತಕ್ಕ ಬಂಗಾರ ಪ್ರಾಣ ಹಾಗೂ ಪಂಚರತ್ನವು ಅಸ್ಥಿಯ ಸಂಕೇತ. ಕಲಶದೊಳಗಿರತಕ್ಕ ಕೂರ್ಚವು ನಾಲಿಗೆ. ನಂತರ ಮೇಲೆ ಇರಿಸತಕ್ಕ ತೆಂಗಿನಕಾಯಿ ತಲೆ ಹಾಗೂ ಅದರಲ್ಲಿ ಆವರಿಸಿರತಕ್ಕ ಸಿಪ್ಪೆ ಕೂದಲಿನ ಸಂಕೇತ. ಕಲಶದ ಮೇಲೆ ಹೊದಿಸಿರುವ ವಸ್ತುವು ಚರ್ಮ ಹಾಗೂ ತೆಂಗಿನಕಾಯಿಯ ಎರಡು ಕಣ್ಣುಗಳು ನೇತ್ರ ಸಂಕೇತ. ನೇತ್ರದ ಕೆಳಗೆ ಇರುವ ಚಿಹ್ನೆಯೇ ಬಾಯಿ. ನಂತರ ಕಲಶದ ಮೇಲೆ ಇರಿಸತಕ್ಕ ಕೂರ್ಚ ಭಗವಂತನ ಕಿರೀಟ. ಭಗವಂತನ ಶರೀರದ ಕಲ್ಪನೆಯೇ ಕಲಶಾರಾಧನೆ. ಬ್ರಹ್ಮಕಲಶೋತ್ಸವದಲ್ಲಿ ಕಲಾವಾಹನೆ ಹಾಗೂ ನ್ಯಾಸಾದಿಗಳಿಂದ ಅರ್ಚಿಸಲ್ಪಡುವ ವಿಶೇಷವಾದ ಕಲಶವು ಜಪ, ಅರ್ಚನಾದಿಗಳಿಂದ ಕೂಡಿರುತ್ತದೆ. ಅಂತಹ ಪವಿತ್ರವಾದ ಕಲಶವನ್ನು ಬಿಂಬಕ್ಕೆ ಅಭಿಷೇಕ್ಷಿಸಿದಾಗ ಬಿಂಬದಲ್ಲಿ ಸ್ಥಿರವಾದ ಸಾನ್ನಿಧ್ಯ ವೃದ್ಧಿಗೊಂಡು ನಮಗೆಲ್ಲರಿಗೆ ಇಷ್ಟಾರ್ಥಗಳನ್ನು ಕೊಡುವಂತಹ ಶಕ್ತಿ ಪ್ರಾಪ್ತಿಯಾಗುತ್ತದೆ.

ಮೃತ್ಯುಂಜಯ ಯಾಗ, ನವಗ್ರಹ ಹಾಗೂ 50ನೇ ವರ್ಷದಿಂದ 100ನೇ ವರ್ಷದವರೆಗೆ ಪ್ರತೀ ಐದೈದು ವರ್ಷಗಳಿಗೊಮ್ಮೆ, ಬೇರೆ ಬೇರೆ ಹೆಸರಿನ ಶಾಂತಿಗಳನ್ನು ನಡೆಸುವ ವಿಧಿ ವಿಧಾನಗಳೂ ಇವೆ. ಎಲ್ಲಾ ಶಾಂತಿ ಹಾಗೂ ಕರ್ಮಗಳಲ್ಲಿ ಕಲಶ ಪೂಜೆಯ ನಂತರ ಕರ್ತೃಗಳಿಗೆ ಅಭಿಷೇಕಿಸಿ ಕಲಶತೀರ್ಥ ಪ್ರಾರ್ಥನೆಯನ್ನು ಮಾಡುವ ಪದ್ಧತಿಯು ಈಗಲೂ ಇದೆ. ಈ ಕಲಶಾರಾಧನೆಯಿಂದ ಕೀರ್ತಿ ಲಾಭ, ಆಯುಷ್ಯ ವೃದ್ಧಿ, ಪ್ರಜ್ಞಾಶಕ್ತಿ ಹಾಗೂ ಮೇಧಾ ಶಕ್ತಿಗಳು ವೃದ್ಧಿಸುತ್ತದೆ. ಸಂಪತ್ತು ಅಭಿವೃದ್ಧಿ, ಬಲ ಉತ್ತಮವಾದ ಯೋಗ್ಯತೆ, ಪಾಪಗಳ ಪರಿಹಾರ ಹಾಗೂ ಪುಣ್ಯ ವೃದ್ಧಿ ಇತ್ಯಾದಿ ಉತ್ತಮ ಫಲಗಳನ್ನು ನಮ್ಮ ಜೀವನದಲ್ಲಿ ಅನುಭವಿಸಬಹುದು.

ಕಲಶ: ಕೀರ್ತಿ ಮಾಯುಶ್ಚ ಪಜ್ಞಾಂ ಮೇಧಾಂ ಶ್ರಿಯಂ ಬಲಂ! ಯೋಗ್ಯತಾಂ ಪ್ರಾಹಾನಿಂ ಚಪುಣ್ಯ ವೃದ್ಧಿಂಚ ಸಾಧಯೇತ್॥ ಸರ್ವೇ ಜನಾಃ ಸುಖಿನೋ ಭವತು। ಸಮಸ್ತ ಸನ್ಮಂಗ ಲಾನಿ ಭವಂತು॥

**– ಬಿ.ಶಂಕರನಾರಾಯಣ ತಂತ್ರಿ**
**ಡೊಂಬಿವಿಲಿ ಪಶ್ಚಿಮ, ಮುಂಬಯಿ.**

## ತುಳಸೀದಾಸನ ಪಂಚ ಬ್ರಹ್ಮಸೂತ್ರಗಳು

ಸ್ವಾಮೀ ವಿವೇಕಾನಂದರು ಹೇಳಿದ್ದಾರೆ; ಮೊದಲು ನಾವು ದೇವರಾಗಿ ಬಳಿಕ ಮತ್ತೊಬ್ಬರನ್ನು ದೇವರನ್ನಾಗಿಸಬೇಕೆಂದು, ಆದರೆ ದೇವರಾಗುವುದು ಹೇಗೆ?

ಕೆಳಗಿನ ಪಂಚ ಬ್ರಹ್ಮಸೂತ್ರಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಪ್ರತಿಯೋರ್ವ ವ್ಯಕ್ತಿಯು ದೇವರಾಗಲು ಸಾಧ್ಯ.

1. ದೈಹಿಕ ಹಾಗೂ ಮಾನಸಿಕ ಆರೋಗ್ಯವಿರುವ ಪ್ರತಿಯೋರ್ವ ವ್ಯಕ್ತಿಯು ತನ್ನ ಅನ್ನವನ್ನು ತಾನೇ ಪ್ರಮಾಣಿಕವಾಗಿ ದುಡಿದು ಸಂಪಾದಿಸಬೇಕು.
2. ಅಷ್ಠ ವ್ಯಸನಗಳನ್ನು ತ್ಯಜಿಸಬೇಕು. ಅಷ್ಠ ವ್ಯಸನಗಳು ಹೀಗಿವೆ.
ಸುಳ್ಳು, ಕಳ್ಳತನ, ಮಾಂಸಾಹಾರ ಈ ಮದ್ಯ ಸೇವನೆ, ಜೂಜು, ಪರಸ್ತ್ರೀ ಸಂಗ, ಬೇಟೆ, ಶ್ರೇಷ್ಟತೆಯ ವ್ಯಸನ.
3. ಪರಬ್ರಹ್ಮವು ಶಬ್ಧ, ಸ್ಪರ್ಷ, ರೂಪ, ರಸ್, ಗಂಧಗಳಿಗೆ ಅತೀತವಾಗಿದೆ. ಆದರೆ ಇವುಗಳೆಲ್ಲವೂ ಪರಬ್ರಹ್ಮವೇ ಆಗಿದೆ ಎಂದು ತಿಳಿಯಬೇಕು. ಅಲ್ಲದೇ ಪರಬ್ರಹ್ಮ ವಸ್ತುವು ಶಾಸ್ತ್ರ, ತರ್ಕ, ಬುದ್ಧಿವಂತಿಕೆ ಇವೆಲ್ಲವನ್ನೂ ಮೀರಿದೆ ಎಂದು ತಿಳಿಯಬೇಕು.
4. ಮೊದಲು ಮನಸ್ಸನ್ನು ಬುದ್ಧಿಯಲ್ಲಿ ಲಯ ಮಾಡಿಕೊಂಡು ನಂತರ ಬುದ್ಧಿ ಮತ್ತು ಅಹಂ ಅನ್ನು ಆತ್ಮನಲ್ಲಿ ಲಯ ಮಾಡಿಕೊಳ್ಳಬೇಕು.
5. ಪರಬ್ರಹ್ಮದಲ್ಲಿ ಎಲ್ಲವನ್ನೂ, ಎಲ್ಲದರಲ್ಲಿಯೂ ಪರಬ್ರಹ್ಮವನ್ನೇ ಕಾಣುತ್ತಾ, ಯೋಗಾರೂಢನಾಗಿ ಪರಬ್ರಹ್ಮವನ್ನೇ ಏಕಾಗ್ರಚಿತ್ತದಿಂದ ಧ್ಯಾನಿಸುತ್ತಿದ್ದರೆ, ಪರಮ ಪವಿತ್ರ, ಗೂಢಾತಿಗೂಢ, ನಿಗೂಢ, ಬ್ರಹ್ಮಾಂಡವನ್ನೇ ವ್ಯಾಪಿಸಿರುವ, ತನ್ನನ್ನೂ ಬೆಳಗಿಸುವ, ಲಕ್ಷ ಕೋಟಿ ಸೂರ್ಯಪ್ರಭೆಯನ್ನೂ ನಾಚಿಸುವ, ತ್ರಿಗುಣಾತೀತ, ನಿರ್ಗುಣ ಪರಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ.

# ನೆನಪಿನಂಗಳದಲ್ಲಿ



ಅಂದು ಬಡತನವಿತ್ತು
ಹಸಿವು ಸೋಲಿಸುತ್ತಿತ್ತು
ಒಮ್ಮೊಮ್ಮೆ ತಂಗಳನ್ನವಿತ್ತು
ಆಟಿಕೆಗೂ ಬರವಿತ್ತು. ಆಟ
ಸಾಗುತ್ತಲಿತ್ತು!
ವರ್ಷಕ್ಕೊಂದು ಹಬ್ಬವಿತ್ತು
ದುಂಡಾದ ಇಡ್ಲಿಯಿತ್ತು
ರುಚಿಸುತ್ತಿದ್ದ ಸಾರಿತ್ತು
ಅಪ್ಪಕೊಡಿಸುತ್ತಿದ್ದ ಹಬ್ಬದ
ಬಟ್ಟೆಯಿತ್ತು
ಸಂಬಂಧ ಬೆಸೆಯುವ ಭೇಟೆಗಳಿತ್ತು
ಹಬ್ಬದಂದು ಎಂಟಾಣೆ
ನಾಣ್ಯಗಳಿತ್ತು!
ಆಟವಾಡಲು ಅಜ್ಜನ
ಆಲದಮರವಿತ್ತು
ಹೊಂಗುಟ್ಟುತ್ತಾ ಮಲಗಲು
ಅಜ್ಜಿಯ ಕತೆಯಿತ್ತು!
ಒಂದೇ ಹಲಸನು ಹಂಚಿ ತಿನ್ನುವ
ಹಲಸದ ಬಂಧಗಳಿತ್ತು!
ಜಾತ್ರೆಯಲಿ ಕೊಂಡ ಪ್ಲಾಸ್ಟಿಕ್
ಚೆಂಡಿತ್ತು.
ತುಟಿ ಕೆಂಪಾಗಿಸುತ್ತಿದ್ದ
ಪರ್ಪಮೆಂಟಿತ್ತು.
ಕೈಗೆ ಕಟ್ಟಲು ತೆಂಗಿನಗರಿಯ
ವಾಚಿತ್ತು.
ಕೇರಿ ಸುತ್ತಾಟಕ್ಕೆ ಬಂಡಿಯಾಟವಿತ್ತು
ಮಳೆಗಾಲದಲಿ ಹರಿದ ಛತ್ರಿಯಿತ್ತು.
ನೆನೆದು ಒದ್ದೆಯಾಗುವ
ಹುಚ್ಚುತನವಿತ್ತು.
ಜ್ವರ ಬಂದರೆ ರಜೆಯೆಂಬ
ಖುಷಿಯಿತ್ತು.
ಜ್ವರದ ರಾತ್ರಿಗಳಲಿ ಅಮ್ಮನ
ಕಾವಲಿತ್ತು.
ಪಾಚಿಯಲಿ ಜಾರಿದ ಅವಮಾನವಿತ್ತು
ಮೋರಿ ನೀರಲೂ
ದೋಣಿಯಾಟವಿತ್ತು.
ಮೀನು ಹಿಡಿಯುವ ಅಭ್ಯಾಸವಿತ್ತು.
ಅದಕ್ಕಂದೇ ಅಪ್ಪನ ಹರಿದ
ಲುಂಗಿಯಿತ್ತು.
ಬದುಕು ಕಲಿಸುತ್ತಿದ್ದ ಹಳ್ಳಿಯ
ಸ್ಕೂಲಿತ್ತು
ಶಾಲೆಗೆ ನಡೆಯಲು ಗದ್ದೆಯ
ದಾರಿಯಿತ್ತು
ದಾರಿಯ ಮರಗಳೂ ಪ್ರೀತಿಯಿತ್ತು
ತಿನ್ನಲು ಗೇರು, ಮಾವು,
ನೇರಳೆಗಳಿತ್ತು
ಉದಾಸೀನದ ವ್ಯಾಯಾಮವಿತ್ತು
ರಾಗದಿ ಹೇಳುತ್ತಿದ್ದ ಮಗ್ಗಿಯಿತ್ತು
ಮಾತಾಡಲು ಕ್ಲಾಸೀಡರ್ ಭಯವಿತ್ತು
ಖುಷಿಕೊಡುತ್ತಿದ್ದ ಲಾಂಗ್–ಬೆಲ್
ಇತ್ತು
ಚೀಲೆಯಲಿ ಕದ್ದ ಬಣ್ಣದ ಬಳಪವಿತ್ತು
ಮತ್ತೆ ಮತ್ತೆ ತಪ್ಪುತ್ತಿದ್ದ
ಉಕ್ತಲೇಖನವಿತ್ತು
ಬರೆದು ಮುಗಿಯದ
Imposition ಇತ್ತು
ಸ್ವತಂತ್ರದಂದು ಎರಡು ಬಾವುಟವಿತ್ತು
ಲಾಡುಕೊಡುವ ಸರದಿಯಲಿ
ಜಗಳವಿತ್ತು
ಖುಷಿಕೊಡುವ
ಲಗೋರಿಯಾಟವಿತ್ತು
ಕಣ್ಣೀರು ತರಿಸುವ ಇಂಜೆಕ್ಷನ್ಗಳಿತ್ತು
ಅಷ್ಟಿಷ್ಟು ನಗು ಮೆತ್ತಿಸಿಕೊಂಡಿರುವ!
ನನ್ನಲ್ಲಿನ ಮಾನವತೆಯೂ ಸತ್ತಿದೆ
ಓ ಬಾಲ್ಯವೇ...
ನೀ ಮತ್ತೆ ಬಂದು ಬಿಡು.



## ಜಾಹಿರಾತು ವಿವರ

| | | | | ವರ್ಣ | ಕಪ್ಪು ಬಿಳುಪು |
|---|---|---|---|---|---|
| ಮುಖಪುಟ | 1/2 ಪುಟ | ರೂ. | - | 20,000.00 | |
| ಕೊನೆಪುಟ | 1/2 ಪುಟ | ರೂ. | - | 15,000.00 | |
| ಒಳಪುಟ | 1/2 ಪುಟ | ರೂ. | - | 10,000.00 | 7,000.00 |

ಒಂದು ಬಾರಿ ಪ್ರಕಟಣೆಗೆ ಮಾತ್ರ

# ರಂಗಭೂಮಿ ಮುಂದಿನ ತಲೆಮಾರಿಗೆ ತಲುಪುವಂತಾಗಬೇಕು

ಮಂಗಳೂರು: ಇಂದಿನ ತಾಂತ್ರಿಕ ಯುಗದಲ್ಲಿ ಯುವಜನರು ಮತ್ತು ವಿದ್ಯಾರ್ಥಿಗಳು ದೃಶ್ಯ ಮಾಧ್ಯಮಗಳತ್ತ ಆಕರ್ಷಿತರಾಗಿದ್ದು, ರಂಗಭೂಮಿಯತ್ತ ಗಮನ ಹರಿಸುವುದು ಕಡಿಮೆ ಯಾಗುತ್ತಿರು ವುದು ಆತಂಕಕಾರಿ ಎಂದು ಪ್ರಶಸ್ತಿ ಪುರಸ್ಕೃತ ಕೊಂಕಣಿ ಚಲನಚಿತ್ರದ ನಿರ್ದೇಶಕ ಕಾಸರಗೋಡು ಚಿನ್ನಾ ತಿಳಿಸಿದರು.



ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಪ್ರಾಯೋಜಕತ್ವದಲ್ಲಿ ರಂಗಸ್ಪಂದನ (ರಿ) ಮಂಗಳೂರು ಇವರು ಪುರಭವನದಲ್ಲಿ ಹಮ್ಮಿಕೊಂಡಿರುವ 2ದಿನದ ಸಾಂಸ್ಕೃತಿಕ ರಂಗಹಬ್ಬದಲ್ಲಿ ಅತಿಥಿಯಾಗಿ ಮಾತಾಡುತ್ತಿದ್ದರು. '80ನೇ ದಶಕದ ನಂತರ ರಂಗಭೂಮಿಯ ಚಾಲನೆ ಕಡಿಮೆಯಾಗುವುದಕ್ಕೆ ಕಾರಣ ಹುಡುಕುವುದಕ್ಕಿಂತ ಮಕ್ಕಳಲ್ಲಿ ರಂಗಭೂಮಿಯ ಬಗ್ಗೆ ಆಸಕ್ತಿ ಹುಟ್ಟಿಸುವ ರಂಗಶಿಬಿರ, ನಾಟಕಸ್ಪರ್ಧೆಗಳನ್ನು ಶಿಕ್ಷಣ ಸಂಸ್ಥೆಗಳಲ್ಲಿ ಏರ್ಪಡಿಸುವುದು ಒಳಿತು ಎಂದರು. ಅಂತರ್‌ಕಾಲೇಜು ನಾಟಕ ಸ್ಪರ್ಧೆ ಏರ್ಪಡಿಸುವಲ್ಲಿ ಜಿಲ್ಲಾಡಳಿತ ಜೊತೆ ವಿವಿಧ ಭಾಷಾ ಅಕಾಡೆಮಿಗಳು ಹೆಜ್ಜೆ ಇರಿಸಬೇಕು ಜೊತೆಗೆ ಹವ್ಯಾಸಿ ಟಿಕೇಟು ರಹಿತ ನಾಟಕಗಳಿಗೆ ಮಂಗಳೂರು ಪುರಭವನ ರೂಪಾಯಿ 5000ಕ್ಕೆ ಲಭ್ಯವಾಗುವಂತಾಗಬೇಕೆಂದರು.'

ಸಾಂಸ್ಕೃತಿಕ ರಂಗಹಬ್ಬವನ್ನು ಜ್ಯೋತಿ ಪ್ರಜ್ವಲಿಸಿ ಚಾಲನೆ ನೀಡಿದ ಹಿರಿಯ ರಂಗಕರ್ಮಿ ಡಾ.ಪಿ.ಸಂಜೀವ ದಂಡೆಕೇರಿ ಅವರು ಸಾಂಸ್ಕೃತಿಕ ಉತ್ಸವಗಳಿಗೆ ಪ್ರೇಕ್ಷಕರು ಹೆಚ್ಚು ಬರುವ ಮೂಲಕ ರಂಗಭೂಮಿಯನ್ನು ಉಳಿಸಿ ಬೆಳೆಸಬೇಕು. ಬಹುಭಾಷಾ ಪ್ರದೇಶ ವಾಗಿರುವ ಮಂಗಳೂರಲ್ಲಿ ತುಳುನಾಟಕಗಳು ಬಿಟ್ಟರೆ ಉಳಿದ ಭಾಷಾ ನಾಟಕಗಳು ವಿರಳ ವಾಗುವುದಕ್ಕೆ ತನ್ನ ಬೇಸರವನ್ನು ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಪಣಂಬೂರು ಬೀಚ್ ಅಭಿವೃದ್ಧಿ ಯೋಜನಾ ಕಾರ್ಯನಿರ್ವಾಹಣಾಧಿಕಾರಿ ಯತೀಶ್ ಬೈಕಂಪಾಡಿ ತುಳು ಕೂಟ(ರಿ) ಕುಡ್ಲದ ಅಧ್ಯಕ್ಷ ಬಿ.ದಾಮೋದರ ನಿಸರ್ಗ ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜಗನ್ನಾಥ ಶೆಟ್ಟಿ ಬಾಳ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕೊಂಕಣಿ ಸಾಹಿತ್ಯ ಅಕಾಡೆಮಿಯ ಈ ಬಾರಿಯ ಗೌರವ ಪುರಸ್ಕೃತರಾದ ಕಾಸರಗೋಡು ಚಿನ್ನಾರವರನ್ನು ಅಭಿನಂದಿಸಲಾಯಿತು. ರಂಗಸ್ಪಂದನ ಸಂಚಾಲಕ ವಿ.ಜಿ.ಪಾಲ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.



## ಕಿಲಕಿಲ



ಮಗನ ಮೇಲಿರುವ ಪ್ರೀತಿಗೋಸ್ಕರ ತಂದೆ ಮಗನಿಗೆ ಹೊಸ ಬೈಕ್ ಖರೀದಿಸಿ ಕೊಡುತ್ತಾರೆ.
ಮರುದಿನ ಪೇಟೆಗೆ ಹೋದ ತಂದೆ ಮಗನ ಬೈಕ್‌ಗಾಗಿ ದರ್ಬೆಯಲ್ಲಿ ಕಾಯುತ್ತಾರೆ.
ಕಾದು ಕಾದು ಸುಸ್ತಾದ ತಂದೆ ಎದುರು ಮಗ ಬರುವುದನ್ನು ಕಂಡು ಖುಷಿಪಡುತ್ತಾರೆ.
ಆದರೆ ತಂದೆ ಮಗನ ಬೈಕ್‌ಗೆ ಕೈತೋರಿಸಿದಾಗ ಮಗ ಬೈಕ್ ನಿಲ್ಲಿಸದೆ ಮುಂದೆ ಸಾಗುತ್ತಾನೆ.
ಮನೆಗೆ ಹೋದ ತಂದೆ ತನ್ನ ತಾಯಿಯತ್ತಿರ ಜಗಳವಾಡುತ್ತಾರೆ.
ಅದೇ ಸಮಯಕ್ಕೆ ಮಗ ಮನೆಗೆ ಬರುತ್ತಾನೆ. ಆಗ ತಾಯಿ ತಂದೆಗೆ ಬೈಕ್ ನಿಲ್ಲಿಸದ ಕಾರಣಕ್ಕಾಗಿ ಮಗನನ್ನು ಬೈಯ್ದು ಯಾಕೆ ಬೈಕ್ ನಿಲ್ಲಿಸಿಲ್ಲ ಎಂದು ಕೇಳುತ್ತಾಳೆ...
ಆಗ ಮಗ ಹೇಳಿದ ಮಾತು..
ನಾನು ಬೈಕ್ ನಿಲ್ಲಿಸಲಿಕ್ಕೆ ಅಪ್ಪನ ಹತ್ತಿರ ಹೆಲ್ಮೆಟ್ ಇರಲಿಲ್ಲವಲ್ಲಾ!.

# ಫುಟ್ಬಾಲ್ ಮಿಂಚು ತಾರೆ ನಿಖಿಲ್ ಹರಿದಾಸ್ ಕರ್ಕೇರ



ಅಹ್ಮದಬಾದಿನ ನಿಖಿಲ್ ಹರಿದಾಸ್ ಕರ್ಕೇರ ಅವರು ದೇಶದ ಪ್ರಸ್ತುತ ಫುಟ್ಬಾಲ್ ಕ್ರೀಡಾ ಕ್ಷೇತ್ರದ ಭರವಸೆ ಮೂಡಿಸುವ ಮಿಂಚು ತಾರೆಯಾಗಿ ಗಮನ ಸೆಳೆಯುತ್ತಿರುವ ಯುವ ಪ್ರತಿಭಾಶಾಲಿ ಆಟಗಾರರಲ್ಲಿ ಪ್ರಮುಖರೆನಿಸಿದ್ದಾರೆ.

"ಗುಜರಾತ್ ರಾಜ್ಯ ಫುಟ್ಬಾಲ್ ಎಸೋಸಿಯೇಸ್" ನೆಲೆಯಿಂದ ಅಧಿಕೃತವಾಗಿ ನಡೆಯುತ್ತಿರುವ ಅಹ್ಮದಾಬಾದ್ ಜಿಲ್ಲಾ ಮಟ್ಟದ ಫುಟ್ಬಾಲ್ ಪಂದ್ಯಗಳಲ್ಲಿ "ಪಶ್ಚಿಮ ರೈಲುವೆ"ಯವರ ಫುಟ್ಬಾಲ್ ಟೀಮಿನ ಕ್ಯಾಪ್ಟನ್ ಆಗಿ ಸತತ ಐದು ಬಾರಿ ಆಯ್ಕೆಗೊಂಡು, ತನ್ನ ಅಪೂರ್ವವಾದ ಕ್ರೀಡಾ ಕೌಶಲವನ್ನು ಮೆರೆದು, ವಿಜಯಗಳಿಸಿ, ಪ್ರಸ್ತುತ ರಾಷ್ಟಮಟ್ಟದ ಅಖಿಲ ಭಾರತ ಫುಟ್ಬಾಲ್ ಫೆಡರೇಶನ್ (AIFF) ಸಂಯೋಜಕತ್ವದ ಪ್ರತಿಷ್ಠಿತ ಸಂತೋಷ್ ಟ್ರೋಫಿ ಪಂದ್ಯಾವಳಿಯಲ್ಲಿ 'Reserve Bank Of India' (R.B.I.) ದ ಪರವಾಗಿ (2012–2015) ದೇಶದ ಪ್ರಮುಖ ನಗರಗಳಲ್ಲಿ ನಡೆದ ರೋಚಕ ಟೂರ್ನಿಗಳಲ್ಲಿ ಅತ್ಯಂತ ಉತ್ಸಾಹದಿಂದ ಪಾಲುಗೊಂಡು, ಉತ್ತಮಮಟ್ಟದ ಚಮತ್ಕಾರಿ ಆಟವನ್ನು ಪ್ರದರ್ಶಿಸಿ 'ಜಯ'ವನ್ನು ತಮ್ಮದಾಗಿ ಮಾಡಿಕೊಂಡು ದೇಶದಾದ್ಯಂತ ಪ್ರಚಾರ ಮಾಧ್ಯಮಗಳಲ್ಲಿ ಮಿಂಚುತ್ತಾರೆ ಎಂಬ ಪ್ರಸಂಶೆಗೆ ಪಾತ್ರರಾಗಿ ಕೀರ್ತಿಗಳಿಸಿರುವ, ನಿಖಿಲ್ ಕರ್ಕೇರ ಕನ್ನಡಿಗರ ಪಾಲಿಗೆ ಮುಖ್ಯವಾಗಿ ಬಿಲ್ಲವರ ಪಾಲಿಗೆ ನಿಜಕ್ಕೂ ಒಂದು ಹೆಮ್ಮೆ.

ನಿಖಿಲ್ ಹರಿದಾಸ್ ಕರ್ಕೇರ (04–06–1993) ಮೂಲತಃ ಕರಾವಳಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಸಜೀಪ ಗ್ರಾಮದವರಾಗಿದ್ದು, ಅವರ ಬಾಲ್ಯ, ಹುಟ್ಟು, ಬೆಳವಣಿಗೆ, ಪ್ರಾಥಮಿಕ, ಉನ್ನತ ಶಿಕ್ಷಣಗಳು ಅಹ್ಮದಬಾದಿನ ಶಬರಿಮಲೆ ಆಶ್ರಮದ ಪರಿಸರದಲ್ಲಿ ನಡೆಯಿತು. ಅವರ ಪೋಷಕರಾದ ಹರಿದಾಸ್ ಕರ್ಕೇರ ದಂಪತಿಗಳು ದಶಕಗಳಿಂದ ಅಹ್ಮದಬಾದಿನ ನಿವಾಸಿಗಳಾಗಿದ್ದು, ಪಶ್ಚಿಮ ರೈಲುವೆಯಲ್ಲಿ ವೃತ್ತಿ ನಿರತರಾಗಿದ್ದು, ಗುಜರಾತ್ ಬಿಲ್ಲವರ ಸಂಘದ ಸಕ್ರೀಯ ಆಜೀವ ಸದಸ್ಯರಾಗಿ ನಿರಂತರ ಸಮಾಜಸೇವೆಗಳಲ್ಲಿ ಪರಿವಾರ ಸಮೇತ ತಮ್ಮನ್ನು ತಾವು ತೊಡಗಿಸಿಕೊಂಡು ಬಂದಿರುವ ಸಜ್ಜನರು.

ನಿಖಿಲ್ ಕರ್ಕೇರ ಒಳ್ಳೆಯ ಫುಟ್ಬಾಲ್ ಕ್ರೀಡಾಪಟುವಾಗಿರುವಂತೆ ತನ್ನ ಶೈಕ್ಷಣಿಕ ಕಲಿಕೆಯಲ್ಲೂ ಸದಾ ಪ್ರಥಮ ಸ್ಥಾನವನ್ನು ತನ್ನದ್ದನ್ನಾಗಿಯೇ ಉಳಿಸಿಕೊಂಡು ಬಂದ ತೀಕ್ಷ್ಣ ಮತಿ, ಬುದ್ಧಿವಂತ ವಿದ್ಯಾರ್ಥಿಯಾಗಿದ್ದು, ಮೊನ್ನೆ ಮೊನ್ನೆ ತಮ್ಮ ಬಿ.ಎ. ಪದವಿಯನ್ನು ಉನ್ನತ ರ‍್ಯಾಂಕ್‌ನೊಂದಿಗೆ ಪಡೆದು, ಸರ್ವತ್ರ ಸಮಾಜ ಬಾಂಧವರ ಪ್ರೀತಿ, ಗೌರವಗಳಿಗೆ ಪಾತ್ರರಾಗಿರುವುದು ಪ್ರಸಂಶನೀಯ.

ನಿಖಿಲ್ ಫುಟ್ಬಾಲ್ ಆಟಕ್ಕಾಗಿ ತನ್ನನ್ನು ತಾನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದರೂ, ಮೊನ್ನೆ ಮೊನ್ನೆ ಮುಲ್ಕಿಯಲ್ಲಿ ನಡೆದ "ಬಿಲ್ಲವ ಕ್ರಿಕೆಟ್ ಟ್ರೋಫಿ – 2016" ಪಂದ್ಯದಲ್ಲಿ ಗುಜರಾತ್ ಬಿಲ್ಲವರ ಟೀಮಿನ ಕ್ರಿಕೆಟ್ ಆಟಗಾರರಾಗಿ ಆಡಿರುವುದು ಅವರ ಸ್ವಜಾತಿ ಪ್ರೇಮವನ್ನು ಎತ್ತಿ ತೋರಿಸುತ್ತದೆ.

ನಿಖಿಲ್ ಕರ್ಕೇರ ಇನ್ನೂ ತೀರ ಚಿಕ್ಕ ಹರೆಯದ ಯುವ ಪ್ರತಿಭೆ. ಅವರ ಭಾವೀ ಭವಿಷ್ಯ ಉಜ್ವಲ ಎಂಬುದರಲ್ಲಿ ಎರಡು ಮಾತಿಲ್ಲ. ಅವರ ವಯೋಸಹಜವಾದ ಹಲವಾರು ಕನಸುಗಳಲ್ಲಿ ಪ್ರಮುಖವಾದುದು, ಮುಂಬರಲಿರುವ ವರ್ಷಗಳಲ್ಲಿ ಒಮ್ಮೆಯಾದರೂ "ಒಲಿಂಪಿಕ್ಸ್ ಕಾಲ್ಚೆಂಡಾಟ"ದಲ್ಲಿ ಭಾಗವಹಿಸಿ ಭಾರತದ ಫುಟ್ಬಾಲ್ ತಂಡವನ್ನು ಪ್ರತಿನಿಧಿಸಿ, ಆಟ ಆಡುವ ಮೂಲಕ ತನ್ನ ದೇಶಕ್ಕೆ "ಚಿನ್ನದ ಪದಕ"ವನ್ನು ಹೊತ್ತು ತರುವ ಉತ್ಕಟ ಮನೋಕಾಂಕ್ಷೆ ಉಳ್ಳವರಾಗಿದ್ದರೆ. ಇದು ಸಮಗ್ರ ಭಾರತೀಯರ ಹೃದಯಂತರಾಳದ ಮನೋಕಾಮನೆಯೂ ಹೌದು. ಅವರಿಗೆ ಶುಭವಾಗಲೆಂದು ನಾವೆಲ್ಲರೂ ಹಾರೈಸೋಣ. ●

# ಖಡ್ಡಾಯವಾಗಿ ಮದುವೆ ಆದವರಿಗೇ ಮಾತ್ರ.



ಬೈಕ್‌ನಲ್ಲಿ ಹಿಂಬದಿ ಸವಾರರಿಗೂ ಹೆಲ್ಮೆಟ್ ಖಡ್ಡಾಯ ಕಾನೂನು...

ನಿಮಗೆ ಒಂದು ಪ್ರಶ್ನೆ... ನಿಮ್ಮ ಹೆಂಡತಿಯನ್ನು ಮದುವೆಗೆ ನಿಮ್ಮ ಬೈಕ್‌ನಲ್ಲಿ ಕರೆದುಕೊಂಡು ಹೋಗುತ್ತೀರಾದ್ರೆ ಹೇಗೆ ಕರೆದುಕೊಂಡು ಹೋಗುತ್ತೀರಾ???

ಆಕೆಗೆ ಹೆಲ್ಮೆಟ್ ಹಾಕಿಸದೇ (ದಂಡ ಕಟ್ಟಲು ತಯಾರಾಗಿ) ಹೋಗುವಿರಾ???

ಆಕೆ ಮಂಗಳೂರು ಮಲ್ಲಿಗೇ ಮುಡಿಸಿ, ಮೇಕ್‌ಅಪ್ ಆಗಿ ಅದರ ಮೇಲೆ ಹೆಲ್ಮೆಟ್ ಧರಿಸಿ ಹೋಗುವೀರಾ??

ಪೌಡರ್, ಬೊಟ್ಟು, ಮಲ್ಲಿಗೆ ಹೂ ಬ್ಯಾಗ್ನಲ್ಲಿ ತುಂಬಿಸಿ (ಮದುವೆ ಹಾಲ್‌ನಲ್ಲಿ ರೆಡಿ ಆಗಲು) ಹೆಲ್ಮೆಟ್ ಧರಿಸಿ ಹೋಗುವಿರಾ

ಆಕೆ ಹೂ ಮುಡಿಸಿ, ಪೌಡರ್, ಬೊಟ್ಟು, ಸೆಂಟ್ ಹಾಕಿ ನೀವು ಆಕೆಯ ಹೆಲ್ಮೆಟ್ ನೀವು ಒಂದು ಕೈಲಿ ಇಡ್ಕೊಂಡು ಹೋಗೂವಿರಾ??

ಟ್ಯಾಕ್ಸಿ ಮಾಡ್ಕೊಂಡು ಹೋಗೂವಿರಾ??

ಆಕೆಯನ್ನು ಮನೆಯಲ್ಲೇ ಬಿಟ್ಟು (ಮದುವೆಯಿಂದ ಬಂದ ನಂತರ ಆಕೆಯ ಕೋಪವನ್ನು ಎದುರಿಸಲು ತಯಾರಾಗಿ ಹೋಗುವಿರಾ???

5ನೇ ಪುಟದಿಂದ

## ಮೂಲ್ಕಿಯಲ್ಲಿ ಬಿಲ್ಲವರ ........

ಒಂಭತ್ತು ಮಾಗಣೆಯ ಮೂಲ್ಕಿಯಲ್ಲಿ ಎಲ್ಲವೂ ಒಳ್ಳೆಯದ್ದೇ ನಡೆಯುತ್ತದೆ. ಇದನ್ನು ಮನುಕುಲಕ್ಕೆ ದೇವರು ತೋರಿಸಿ ಕೊಟ್ಟಿದ್ದಾರೆ. ದುರ್ಗಾದೇವಿಯು ಮೂಲ್ಕಿಯಲ್ಲಿ ಕೋಟಿಚೆನ್ನಯರಿಗೆ, ಬಪ್ಪನಾಡಿನಲ್ಲಿ ಬಪ್ಪಬ್ಯಾರಿಗೆ ಒಲಿದ ಇತಿಹಾಸವುಳ್ಳ ಇಲ್ಲಿ ನಾವು ಸಾಮರಸ್ಯತ್ವವನ್ನು ತಿಳಿದು ಬಾಳಬಹುದು. ಇಂತಹ ಜಾಗದಲ್ಲಿ ಸಮಗ್ರ ಬಿಲ್ಲವರ ಏಕತೆಯ ಪಂದ್ಯಾಟ ಎಲ್ಲಾ ಬಿಲ್ಲವರ ಅಭಿಮಾನವಾಗಿದೆ. ಬಿಲ್ಲವರಿಗೆ ನಾಯಕತ್ವ ನೀಡಿದ ನಾಡು ಇದಾಗಿದೆ. ಸಮಗ್ರ ಬಿಲ್ಲವರು ತಮ್ಮ ಏಕತೆಯನ್ನು ಮೆರೆದು ಭವಿಷ್ಯತ್ತಿನ ಪೀಳಿಗೆಗೆ ಮಾದರಿಯಾಗಬೇಕು. ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮುನ್ನಡೆದು ಸಮಾಜ ಸೇವಾ ನಿರತವಾಗಿ ಇಡೀ ಸಮಾಜವೇ ಸಲಾಂ ಹಾಕುವಂತೆ ನಮ್ಮ ನಡೆಯಾಗಲಿ ಎಂದು ಜಯಸುವರ್ಣರು ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಲ್ಲವಾಸ್ ದುಬಾಯಿ ಅಧ್ಯಕ್ಷ ಸತೀಶ್ ಪೂಜಾರಿ, ಗುರು ಸೇವಾ ಸಮಿತಿ ಬಹರೆನ್ ಬಿಲ್ಲವಸ್‌ನ ಅಧ್ಯಕ್ಷ ರಾಜ್ ಕುಮಾರ್, ಒಮನ್ ಬಿಲ್ಲವಸ್ ಮಸ್ಕತ್ ಅಧ್ಯಕ್ಷ ಎಸ್.ಕೆ.ಪೂಜಾರಿ, ಬಿಲ್ಲವ ಸಂಘ ಕುವೈಟ್ ಅಧ್ಯಕ್ಷ ಚಿತ್ರೇಕ್ ಬಂಗೇರ, ಗುಜರಾತ್ ಬಿಲ್ಲವ ಸಂಘದ ಅಧ್ಯಕ್ಷ ದಯಾನಂದ ಬೋಂಟ್ರ, ಯುವ ವಾಹಿನಿ ಕೇಂದ್ರ ಸಮಿತಿ ಮಂಗಳೂರು ಅಧ್ಯಕ್ಷ ಸಂತೋಷ್ ಕುಮಾರ್, ಶ್ರೀ ನಾರಾಯಣ ಗುರು ಯುವ ವೇದಿಕೆ ಮಂಗಳೂರು ಅಧ್ಯಕ್ಷ ಲೋಹಿತ್ ಕುಮಾರ್, ಬಿಲ್ಲವರ ಪರಿಷತ್ ಉಡುಪಿ ಅಧ್ಯಕ್ಷ ಶೇಖರ ಕರ್ಕೇರ, ಅಖಿಲ ಭಾರತ ಬಿಲ್ಲವ ಏಕೀಕರಣ ಸಮಿತಿ ಮಂಗಳೂರು ಅಧ್ಯಕ್ಷ ರವಿ ಪೂಜಾರಿ ಚಿಲಿಂಬಿ, ನೂತನ ಸುವರ್ಣ ಪುಣೆ ಪ್ರಮುಖರಾಗಿ ಉಪಸ್ಥಿತರಿದ್ದರು.

ಚಿತ್ರಾ ಸುವರ್ಣ ಮತ್ತು ಸುಗಂಧಿ ಸತೀಶ್ ತುಳುನಾಡ ಸರ್ವ ದೈವದೇವರುಗಳನ್ನು ಸ್ತುತಿಸಿದರು. ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತ, ಬಿಲ್ಲವ ಕ್ರೀಡಾ ಸಮಿತಿ ಅಧ್ಯಕ್ಷ ರಾಜಶೇಖರ್ ಆರ್.ಕೋಟ್ಯಾನ್ ಮುದರಂಗಡಿ ಸ್ವಾಗತಿಸಿದರು. ಕ್ರೀಡಾ ಸಮಿತಿ ಕಾರ್ಯಾಧ್ಯಕ್ಷ ಎಂ.ಚಂದ್ರಶೇಖರ ಸುವರ್ಣ ಪ್ರಸ್ತಾವಿಕ ನುಡಿಗಳನ್ನಾಡಿದರು. ಸಂಚಾಲಕ ಬಿಪಿನ್ ಪ್ರಸಾದ್ ಮೂಲ್ಕಿ, ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ಕುಬೆವೂರು, ಕೋಶಾಧಿಕಾರಿ ಹರೀಶ್ಚಂದ್ರ ಅಮೀನ್ ಕಟಪಾಡಿ, ಸಂಘಟಕರಾದ ಸುರೇಂದ್ರ ಎ.ಪೂಜಾರಿ, ಹರೀಶ್ ಜಿ.ಅಮೀನ್, ಶ್ರೀನಿವಾಸ ಆರ್.ಕರ್ಕೇರ, ಭಾಸ್ಕರ್ ಎಂ.ಸಾಲ್ಯಾನ್, ಊರ್ಮಿಳಾ ರಮೇಶ್‌ಕುಮಾರ್, ದಿನೇಶ್ ಅಮೀನ್, ಚಿದಂಬರ್ ಹೆರಾಜೆ, ನಿಲೇಶ್ ಪೂಜಾರಿ ಪಲಿಮಾರು ಅತಿಥಿಗಳಿಗೆ ಪುಷ್ಪಗುಚ್ಛಗಳನ್ನಿತ್ತು ಗೌರವಿಸಿದರು. ಕ್ರೀಡಾ ಸಮಿತಿ ಸಹ ಸಂಚಾಲಕ ನರೇಂದ್ರ ಕೆರೆಕಾಡು ಅತಿಥಿಗಳನ್ನು ಪರಿಚಯಿಸಿ ಕಾರ್ಯಕ್ರಮ ನಿರೂಪಿಸಿದರು. ಬಿಲ್ಲವರ ಅಸೋಸಿಯೇಶನ್ ಮುಂಬಯಿ ಅಧ್ಯಕ್ಷ ನಿತ್ಯಾನಂದ ಡಿ.ಕೋಟ್ಯಾನ್ ಧನ್ಯವದಿಸಿದರು.

ಮೈದಾನದಲ್ಲಿ ನಿರ್ಮಿತ ಮಂದಿರದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳಿಗೆ ಹಾಗೂ ಹರೀಶ್ ಶಾಂತಿ ಹೆಜಮಾಡಿ ಪೂಜೆ ನೆರವೇರಿಸಿದರು. ಕೋಟಿಚೆನ್ನಯ ಮತ್ತು ಕಾಂತಬಾರೆಬುದಬಾರೆ ಅವರನ್ನು ಸ್ತುತಿಸಿ ಪಂದ್ಯಾಟ ಆದಿಗೊಳಿಸಲಾಯಿತು. ಅಖಿಲ ಭಾರತ ಬಿಲ್ಲವರ ಯೂನಿಯನ್ ಮತ್ತು ಬಿಲ್ಲವ ಜಾಗೃತಿ ಬಳಗ ಮುಂಬಯಿ ತಂಡಗಳು ಮೊದಲ ಪಂದ್ಯಾಟದಲ್ಲಿ ಸೆಣದಾಡಿದವು. ಗೌರವಾಧ್ಯಕ್ಷ ಜಯ ಸುವರ್ಣರು ಅತಿಥಿಗಳು ಮತ್ತು ಅಂಪೇರ್‌ಗಳಾದ ರೊನಾಲ್ಡ್ ಪಿಂಟೋ, ಇಬ್ರಾಹಿಂ ಉಡುಪಿ, ಸುಲೇಮಾನ್ ಕಟಪಾಡಿ ಮತ್ತು ರಾಜೇಶ್ ಮೂಲ್ಕಿ ಅವರಿಗೆ ಸ್ಮರಣಿಕೆಗಳನ್ನಿತ್ತು ಗೌರವಿಸಿದರು. ವಿಜಯಕುಮಾರ್ ಕುಬೆವೂರು ಕ್ರೀಡಾಕೂಟದ ಮಾಹಿತಿಯನ್ನಿತ್ತರು.

ಬಿಲ್ಲವರ ಅಸೋಸಿಯೇಶನ್ ಮುಂಬಯಿ ಇದರ ಮೂವತ್ತು ಸೇವಾ ದಳಪತಿಗಳ ಶಿಸ್ತುಪಾಲನಾ ಸೇವೆ ಪ್ರಶಂಸನೆಗೆ ಕಾರಣವಾಯಿತು. ಸಂಜೆ ರಾಜಶೇಖರ್ ಆರ್.ಕೋಟ್ಯಾನ್ ನಿರ್ಮಾಪಕ, ನಿರ್ದೇಶಕತ್ವ ನಟನೆಯ 2014ನೇ ಸಾಲಿನ ಕರ್ನಾಟಕ ರಾಜ್ಯದ ಚಲನಚಿತ್ರ ಪ್ರಶಸ್ತಿ 'ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ' ಪ್ರಶಸ್ತಿ ವಿಜೇತ 'ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ' ತುಳು ಚಲನಚಿತ್ರ ಪ್ರದರ್ಶಿಸಲ್ಪಟ್ಟಿತು. ●

Himalaya
WELLNESS SINCE 1930


















Address : The Himalaya Drug Company
Makali, Bangalore - 562 162, India
Phone : +918023714444
Facsimile : +918023714477
E-mail :human.resources@himalayahealthcare.com
Website : www.himalayahealthcare.com

Printed, Published and owned by K.P. Manjunath, Raghu Building, Urvastore Mangalore - 575 006. Printed at Digantha Mudrana, Yeyyady Mangalore - 575 008. Published at Raghu Building, Urvastore Mangalore - 575 006 Edtor , K.P. Manjunath Raghu Building, Urvastore, Mangalore - 575 006.